# ಫೋನ್ ಸಂಭಾಷಣೆಯ ಶಿಷ್ಟಾಚಾರಗಳು

## (ಅದಬುಲ್ ಹಾತಿಫ್)

## [ أدب الهـاتف ]

[Kannada – ಕನ್ನಡ – كنادي ]


ಅಶ್ಶೈಖ್ ಬಕ್ರ್ ಇಬ್ನ್ ಅಬ್ದಿಲ್ಲಾಹ್ ಅಬೂ ಝೈದ್ (ﷺ)

للشيخ بكر بن عبد الله أبو زيد رحمه الله تعالى

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



www.islamhouse.com

1435 – 2014

# ಒಳಪುಟಗಳಲ್ಲಿ...


| | | |
|---|---|---|
| | ಪ್ರಸ್ತಾವನೆ | 4 |
| 1. | ಮೊಟ್ಟಮೊದಲು ಸಂಖ್ಯೆಯನ್ನು ದೃಢಪಡಿಸುವುದು | 7 |
| 2. | ಕರೆ ಮಾಡಬೇಕಾದ ಸಮಯ | 8 |
| 3. | ಎಷ್ಟು ಸಲ ಕರೆ ಮಾಡಬೇಕು? | 11 |
| 4. | ಕರೆ ಮಾಡಬೇಕಾದ ಅವಧಿ | 12 |
| 5. | ಕರೆ ಮಾಡುವುದು ಮತ್ತು ಕೊನೆಗೊಳಿಸುವುದು ಸಲಾಮ್‌ನಿಂದಾಗಿರಬೇಕು | 13 |
| 6. | ಫೋನ್ ಸಂಭಾಷಣೆಯನ್ನು ಸಲಾಮ್‌ನಿಂದ ಕೊನೆಗೊಳಿಸುವುದು | 17 |
| 7. | ಧ್ವನಿಯನ್ನು ತಗ್ಗಿಸುವುದು | 17 |
| 8. | ಫೋನ್ ಮತ್ತು ಮಹಿಳೆಯರು | 19 |
| 9. | ಜನರಿಗೆ ಅವರ ಸ್ಥಾನಮಾನವನ್ನು ನೀಡುವುದು | 21 |
| 10. | ಕರೆ ಎತ್ತುವುದನ್ನು ಕಾಯುವ ಸಮಯ | 23 |
| 11. | ಇತರರ ಫೋನನ್ನು ಬಳಸುವುದು | 24 |
| 12. | ಫೋನ್ ಮತ್ತು ಮನೆಯವರು | 25 |

13. ಫೋನ್ ಮತ್ತು ಕಛೇರಿ 26

14. ಫೋನ್ ಮತ್ತು ಘತ್ವಾ ಕೇಳುವುದು 27

15. ಚೈತನ್ಯದಾಯಿ ಫೋನ್ 29

16. ಕಿರುಕುಳ ನೀಡುವ ಫೋನ್ 30

ಎ. ದುಷ್ಪಟ್ಟು ವಂಚನೆ 30

ಬಿ. ಕದ್ದಾಲಿಕೆಯ ಉಪಕರಣ 33

ಸಿ. ಫೋನ್ ಮೂಲಕ ಚುಡಾಯಿಸುವುದು 34

ಡಿ. ಫೋನಿನ ಹುಚ್ಚು 35

ಇ. ಬೆದರಿಕೆಯ ಫೋನ್ 36

ಎಫ್. ಕಾಲ್ಪನಿಕ ಫೋನ್ 38

بِسْمِ اللهِ الرَّحْمَنِ الرَّحِيم

# ಪ್ರಸ್ತಾವನೆ

ಸರ್ವಸ್ತುತಿ ಅಲ್ಲಾಹನಿಗೆ ಮೀಸಲು. ಅಲ್ಲಾಹನ ರಸೂಲರ ಮೇಲೆ ಸಲಾತ್ ಮತ್ತು ಸಲಾಮ್ ಇರಲಿ, ಮತ್ತು ಅವರ ಸಹಾಬಾಗಳ ಮೇಲೂ, ಪ್ರತಿಫಲ ದಿನದ ತನಕ ಅವರ ಮಾರ್ಗದರ್ಶನದಂತೆ ನಡೆಯುವವರ ಮೇಲೂ ಇರಲಿ.

ಮುಂದುವರಿದು ಹೇಳುವುದೇನೆಂದರೆ,

ಫೋನ್‌ಗಳಲ್ಲಿ ಸಂಭಾಷಣೆ ಮಾಡುವಾಗ ಪಾಲಿಸಬೇಕಾದ ಶರಈ ಶಿಷ್ಟಾಚಾರಗಳನ್ನು, ಸಂದರ್ಶನ ಮಾಡುವುದು, ಪ್ರವೇಶಾನುಮತಿ ಕೋರುವುದು, ಮಾತನಾಡುವುದು, ಇತರರೊಂದಿಗೆ ಸಂಭಾಷಣೆ ಮಾಡುವುದು ಮೊದಲಾದವುಗಳಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳಿಂದ, ಅವುಗಳ ಪ್ರಮಾಣ, ಸಮಯ, ಸ್ಥಳ, ಮಾತನಾಡುವ ಶೈಲಿ ಮತ್ತು ಗುಣಗಳಿಂದ ತೆಗೆದು ಕೊಳ್ಳಲಾಗುತ್ತದೆ. ಇವೆಲ್ಲವೂ ಶರೀಅತ್ತಿನ ಸ್ಪಷ್ಟವಚನಗಳಿಂದ ನಾವು ಅರಿತುಕೊಂಡಿರುವಂತದ್ದೇ ಆಗಿವೆ. ಅಥವಾ ಅರಿತುಕೊಂಡಿದ್ದೇವೆಂಬ ನಿಯಮದಲ್ಲಿರುವಂತದ್ದಾಗಿವೆ. ಅದೇ ರೀತಿ ಮುಸ್ಲಿಮನ ಬದುಕನ್ನು ಉತ್ಕೃಷ್ಟಗೊಳಿಸುವುದಕ್ಕಾಗಿ ಇಸ್ಲಾಮ್ ಯಾವುದರೆಡೆಗೆ ಕರೆ ನೀಡಿದೆಯೋ ಆ ಶ್ರೇಷ್ಠತೆಗಳ ಪಟ್ಟಿಯಲ್ಲಿ, ಒಳಿತುಗಳಲ್ಲಿ ಮತ್ತು ಉನ್ನತವಾದ ಗೌರವಾನ್ವಿತ ಸ್ವಭಾವಗುಣಗಳಲ್ಲಿ ಇವೆಲ್ಲವೂ ಒಳಪಡುತ್ತವೆ. ಮಾತ್ರವಲ್ಲ, ಇವೆಲ್ಲವನ್ನೂ ಮೃದುತ್ವ ಮತ್ತು ಸೌಮ್ಯತೆಯ ಮೇಲೆ ನಿರ್ಮಿಸಲಾಗಿದೆ ಮತ್ತು ಈ ಅನುಗ್ರಹೀತ ಹಾಗೂ ಮಹಾ ಶರೀಅತ್ತಿನ ಪ್ರವಾದಿಯಾದ ಮುಹಮ್ಮದ್(ﷺ) ರವರನ್ನು ಅನುಕರಣೆ ಮಾಡುವುದರ ಮೇಲೂ ನಿರ್ಮಿಸಲಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೀಗೆ ಹೇಳಿದ್ದಾಗಿ ಅವರಿಂದ ದೃಢಪಟ್ಟಿದೆ:

« إِنَّ الرِّفْقَ لَا يَكُونُ فِي شَيْءٍ إِلَّا زَانَهُ، وَلَا يُنْزَعُ مِنْ شَيْءٍ إِلَّا شَانَهُ ».

**"ಯಾವುದರಲ್ಲಿ ಸೌಮತೆಯಿರುತ್ತದೋ ಅದು ಅದನ್ನು ಅಂದಗೊಳಿಸುತ್ತದೆ ಮತ್ತು ಯಾವುದರಿಂದ ಸೌಮ್ಯತೆಯನ್ನು ಕಳಚಲಾಗುತ್ತದೋ ಅದು ಅದನ್ನು ಅಸಹ್ಯ ಗೊಳಿಸುತ್ತದೆ." [ಮುಸ್ಲಿಮ್]**

ಪ್ರವಾದಿ(ﷺ)ರವರು ಹೀಗೆ ಹೇಳಿದ್ದಾಗಿಯೂ ದೃಢಪಟ್ಟಿದೆ:

« مَنْ يُحْرَمْ الرِّفْقَ يُحْرَمْ الْخَيْرَ كُلَّهُ »

**"ಯಾರಿಗೆ ಸೌಮ್ಯತೆಯನ್ನು ತಡೆಹಿಡಿಯಲಾಗಿದೆಯೋ ಅವನಿಗೆ ಒಳಿತುಗಳೆಲ್ಲ ವನ್ನೂ ತಡೆಹಿಡಿಯಲಾಗಿದೆ." [ಮುಸ್ಲಿಮ್]**

ಫೋನ್ ಸಂಭಾಷಣೆಯ ಶಿಷ್ಟಾಚಾರಗಳು ಎರಡು ಕಡೆಗಳಿಂದ ಬೇಡಲಾಗುವ ಶಿಷ್ಟಾಚಾರಗಳಾಗಿವೆ. ಕರೆ ಮಾಡುವವನಿಂದ ಮತ್ತು ಕರೆ ಸ್ವೀಕರಿಸುವವನಿಂದ. ಆದರೆ ಕರೆ ಮಾಡುವವನು ಪಾಲಿಸಬೇಕಾದ ಶಿಷ್ಟಾಚಾರಗಳಿಗೆ ಹೆಚ್ಚು ಮಹತ್ವವಿದೆ. ಯಾಕೆಂದರೆ ಅವನು ಬೇಡಿಕೆಯಿಡುವವನಾಗಿದ್ದಾನೆ. ಬೇಡಿಕೆ ಯಿಡುವವನು ಹೆಚ್ಚಿನ ಸಂದರ್ಭಗಳಲ್ಲೂ ಕೇಳುವವನಿಗೆ ಸಮವಾಗಿದ್ದಾನೆ. ಆದ್ದರಿಂದ ಅವನ ಸ್ಥಾನದಲ್ಲಿ ಬಲಹೀನತೆಗಳಿವೆ. ಆ ಬಲಹೀನತೆಗಳನ್ನು ಅವನು ಉತ್ತಮ ಶಿಷ್ಟಾಚಾರಗಳ ಮೂಲಕ ನಿವಾರಿಸಬೇಕಾಗಿದೆ.

ಈ ಕಾರಣದಿಂದಾಗಿ, ಈ ಶಿಷ್ಟಾಚಾರಗಳಿಂದ ಮತ್ತು ಅದರಂತಿರುವವುಗಳಿಂದ ಸ್ವತಃ ಅಲಂಕಾರಗೊಳ್ಳುವುದು ಸಾಹೋದರ್ಯತೆ, ಪ್ರೇಮ, ಉತ್ತಮ ವರ್ತನೆ, ಕರಾರು ಪಾಲನೆ, ವಿಶ್ವಾಸಾರ್ಹತೆಯ ಸಂರಕ್ಷಣೆ, ಒಳಿತುಗಳ ಬೆಳವಣಿಗೆ ಮತ್ತು ಕೆಡುಕುಗಳ ನಿವಾರಣೆಯನ್ನು ಹಬ್ಬಿಸುವುದರ ಮೇಲೆ ನಿರ್ಮಿಸಲಾದ ಇಸ್ಲಾಮಿನ ಭವ್ಯ ಪಟ್ಟಣದ ಕಟ್ಟಡಗಳಾಗಿ ಮಾರ್ಪಟ್ಟಿವೆ. ಆದ್ದರಿಂದ ಸತ್ಯವಾಗಿಯೂ ಈ ಶಿಷ್ಟಾಚಾರಗಳು ಇಸ್ಲಾಮಿನ ಉದ್ದೇಶಗಳಲ್ಲಿ ಒಳಪಟ್ಟದ್ದಾಗಿವೆ.

ನಾವು ಈ ಶಿಷ್ಟಾಚಾರಗಳ ವಿವರಣೆಯನ್ನು ಒಂದರ ನಂತರ ಒಂದರಂತೆ ನೀಡುವೆವು. ಜನರ ಸ್ಥಿತಿ, ಸ್ಥಳ, ಕಾಲ, ಪದವಿ ಮತ್ತು ಸಾಮರ್ಥ್ಯಗಳು ಬದಲಾಗುವುದನ್ನು ಅವಲಂಬಿಸಿ ಈ ನಿಯಮಗಳು ಮೊತ್ತವಾಗಿ ಬದಲಾ

ಗುತ್ತವೆಯಾದರೂ, ಬುದ್ಧಿವಂತನೂ ಯಶಸ್ಸನ್ನು ಕರುಣಿಸಲ್ಪಟ್ಟವನೂ ಆಗಿರುವ ವ್ಯಕ್ತಿ ವಿಷಯಗಳನ್ನು ಶರೀಅತ್ತಿನ ತಕ್ಕಡಿಯಲ್ಲಿ ತೂಗಿ ನೋಡಿ, ಈ ಶಿಷ್ಟಾಚಾರಗಳನ್ನು ಪಾಲಿಸದ ವ್ಯಕ್ತಿಗೆ ರಿಯಾಯಿತಿಯನ್ನು ನೀಡುವನು. ಯಾಕೆಂದರೆ ಬುದ್ಧಿ ಬಳಸುವುದರಲ್ಲಿ, ವಿದ್ಯಾಭ್ಯಾಸದಲ್ಲಿ, ರುಚಿಯಲ್ಲಿ ಮತ್ತು ಉತ್ತಮ ವರ್ತನೆಯಲ್ಲಿ ಜನರೆಲ್ಲರೂ ಒಂದೇ ಪದವಿಯನ್ನು ಹೊಂದಿಲ್ಲ. ಆದ್ದರಿಂದ ಸೌಭಾಗ್ಯವಂತನಿಗೆ ವಿಷಯವನ್ನು ಮನದಟ್ಟು ಮಾಡಲಾದರೆ ಅವನು ಅದನ್ನು ಅರ್ಥ ಮಾಡಿಕೊಳ್ಳುವನು ಮತ್ತು ಉಪದೇಶ ನೀಡಲಾದರೆ ಅವನು ಅದನ್ನು ಸ್ವೀಕರಿಸುವನು. ಈ ಉತ್ತಮ ವಾಕ್ಯವು ಮೂರು ವಿಷಯಗಳನ್ನು ಹೇಳುವಂತೆ ನನ್ನನ್ನು ಪ್ರೇರೇಪಿಸಿದೆ:

* **ಒಂದು:** ಇದು ನನಗೂ ಮತ್ತು ಅಲ್ಲಾಹು ಇಚ್ಛಿಸಿದ ನನ್ನ ಸಹೋದರರಿಗೂ ಒಂದು ಉಪದೇಶವಾಗಿರಬೇಕು.

* **ಎರಡು:** ಎರಡು ವಿಷಯಗಳ ಬಗ್ಗೆ ಎಚ್ಚರಿಕೆ ನೀಡುವುದು. ಈ ಎರಡು ವಿಷಯಗಳಿಂದಾಗಿ ಜನರು ಬಹಳ ತೊಂದರೆಪಡುತ್ತಿದ್ದಾರೆ.

1. ಕರೆಯನ್ನು ಸ್ವೀಕರಿಸಲಾದರೆ ಕರೆಯನ್ನು ಸ್ವೀಕರಿಸಿದವನು ಮಾತನಾಡುವ ತನಕ **ಕರೆ ಮಾಡಿದವನು ಮೌನವಾಗಿರುವುದು**. ಇದು ಕರೆ ಸ್ವೀಕರಿಸಿದವನು ಯಾರೆಂದು ತಿಳಿಯುವುದಕ್ಕಾಗಿದೆ. ಅದು ತಾನು ಉದ್ದೇಶಿಸಿದ ವ್ಯಕ್ತಿಯಲ್ಲದಿದ್ದರೆ ಅವನು ಕರೆಯನ್ನು ಕೊನೆಗೊಳಿಸುತ್ತಾನೆ. ಇದರ ಬಗ್ಗೆಯಿರುವ ಎಚ್ಚರಿಕೆ, ವಿರೋಧ ಮತ್ತು ಇದು ನಿಕೃಷ್ಟ ಸ್ವಭಾವವಾಗಿದೆಯೆಂಬ ವಿವರಣೆಯು ಮುಂದೆ ಬರಲಿದೆ.

2. ಕರೆ ಸ್ವೀಕರಿಸಿದವನ ಒಪ್ಪಿಗೆಯೋ, ಅರಿವೋ ಇಲ್ಲದೆ **ಕರೆಯನ್ನು ಧ್ವನಿಮುದ್ರಣ ಮಾಡುವುದು**. ಇದು ವಿಶ್ವಾಸದ್ರೋಹ ಮತ್ತು ಲಜ್ಜಾಹೀನತೆಯಾಗಿದೆ.

* **ಮೂರು:** ಟೆಲಿಫೋನ್, ಮೊಬೈಲ್ ಮೊದಲಾದ ಉಪಕರಣಗಳು ಬದುಕಿನ ಅವಿಭಾಜ್ಯ ಅಂಗಗಳಾಗಿ ಮಾರ್ಪಟ್ಟಿವೆ. ಅವು ಸಂಪರ್ಕ

ಮಾಧ್ಯಮಗಳ ಪೈಕಿ ಪ್ರಮುಖವೂ ಅತಿವೇಗವಾಗಿ ಸಂಪರ್ಕಿಸಬಹುದಾದಂತದ್ದೂ ಆಗಿವೆ. ಬರೆಯುವ ಕಷ್ಟವಿಲ್ಲದೆ ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೇಳುವ ಅವಕಾಶವನ್ನು ಅದು ನೀಡುತ್ತದೆ. ಇದರಿಂದಾಗಿ ಶ್ರಮ, ಸಮಯ, ಧನ ಉಳಿಯುತ್ತದೆ. ಹೋಗಿಬರುವ ಕಷ್ಟವಿಲ್ಲದೆ ಬೇಡಿಕೆಗೆ ಶೀಘ್ರವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ. ಅಲ್ಲಾಹು ಒದಗಿಸಿದ ಅನುಗ್ರಹಕ್ಕಾಗಿ ಅವನಿಗೆ ಸ್ತುತಿ.

ಆದ್ದರಿಂದ ಫೋನ್ ಸಂಭಾಷಣೆಯ ಶಿಷ್ಟಾಚಾರಗಳನ್ನು ಶರೀಅತ್ತಿನ ಪ್ರಕಾರ ವಿವರಿಸಬೇಕಾದ ಅಗತ್ಯವಿದೆ. ಆ ಶಿಷ್ಟಾಚಾರಗಳು ಹೀಗಿವೆ:

## 1. ಮೊಟ್ಟಮೊದಲು ಸಂಖ್ಯೆಯನ್ನು ದೃಢಪಡಿಸುವುದು

ಕರೆ ಮಾಡುವುದಕ್ಕೆ ಮೊದಲೇ ನೀವು ಯಾವ ಸಂಖ್ಯೆಗೆ ಕರೆ ಮಾಡುತ್ತಿದ್ದೀರಿ ಎಂಬುದನ್ನು ದೃಢಪಡಿಸಿರಿ. ಯಾಕೆಂದರೆ ತಪ್ಪು ಸಂಖ್ಯೆಗೆ ಮಾಡಿದ ಕರೆಯು ಮಲಗಿರುವವನನ್ನು ಎಬ್ಬಿಸುತ್ತದೆ, ಅಥವಾ ರೋಗಿಯಾಗಿರುವವನಿಗೆ ತೊಂದರೆ ಕೊಡುತ್ತದೆ, ಅಥವಾ ಇತರರಿಗೆ ವ್ಯರ್ಥವಾಗಿ ಒಂದು ಕೆಲಸ ಮಾಡುವಂತೆ ಮಾಡುತ್ತದೆ. ಆದ್ದರಿಂದ ಎರಡು ವಿಷಯಗಳು ನಿಮ್ಮ ಕೈಯಲ್ಲಿರುವ ತನಕ ನೀವು ಕರೆ ಮಾಡಲು ಮುಂದಾಗಬಾರದು.

ಒಂದು: ಸಂಖ್ಯೆಯು ನಿಮ್ಮ ಕಣ್ಣ ಮುಂದಿರುವುದು ಅಥವಾ

ಎರಡು: ಅದು ನಿಮ್ಮ ಸ್ಮರಣೆಯಲ್ಲಿ ಅಚ್ಚೊತ್ತಿರುವುದು.

ನಿಮ್ಮ ದೃಷ್ಟಿಯನ್ನು ಬೇರೆ ಕಡೆಗೆ ಸರಿಸಿ ಫೋನ್‌ನ ಗುಂಡಿಯನ್ನು ಒತ್ತಬಾರದು. ಇನ್ನು ನಿಮ್ಮಿಂದೇನಾದರೂ ಪ್ರಮಾದವುಂಟಾದರೆ, ನಯವಾಗಿ ನಿಮ್ಮ ತಪ್ಪನ್ನು ಒಪ್ಪಿಕೊಂಡು **‘ತಪ್ಪಾಯಿತು ಕ್ಷಮಿಸಿ’** ಎನ್ನಿರಿ.

ಓ ಕರೆ ಸ್ವೀಕರಿಸುವವರೇ, ನಿಮಗೆ ಯಾರಾದರೂ ಪ್ರಮಾದಪೂರ್ವಕ ಕರೆ ಮಾಡಿದರೆ ಅದಕ್ಕಾಗಿ ಕೆರಳದಿರಿ. ಆತನ ಮೇಲೆ ರೇಗುವುದಾಗಲಿ, ಆತನನ್ನು ಹಿಂಸಿಸುವುದಾಗಲಿ ಮಾಡದಿರಿ. ಆತನೊಂದಿಗೆ, **'ಕ್ಷಮಿಸಿ; ಇದು ತಪ್ಪು ಸಂಖ್ಯೆ'** ಎಂದು ಹೇಳಿರಿ. ಯಾಕೆಂದರೆ ಆತ ನಿಜವಾಗಿಯೂ ಪ್ರಮಾದಪೂರ್ವಕ ಕರೆ ಮಾಡಿದವನಾಗಿದ್ದರೆ ಆತ ತಪ್ಪಿತಸ್ಥನಲ್ಲ. ಮಾತ್ರವಲ್ಲ, ಹೀಗೆ ಹೇಳುವ ಮೂಲಕ ನೀವು ಅವನಿಗೆ ಸಂತೋಷವಾಗುವಂತೆ ಮಾಡಿದವರಾಗುವಿರಿ. ಅವನ ಮೇಲೆ ಏರಿ ಹೋಗಲು ನಿಮಗೆ ಯಾವುದೇ ಮಾರ್ಗವೂ ಇಲ್ಲ.

ಇನ್ನು ಆತ ಉದ್ದೇಶಪೂರ್ವಕವಾಗಿ ತೊಂದರೆ ಕೊಡುವವನಾಗಿದ್ದರೆ, ಸೌಮ್ಯತೆಯ ಬಾಣವು ಆತನನ್ನು ಈಗಾಗಲೇ ತೂರಿಕೊಂಡಿದೆ. ನಿಮಗೆ ಅದಕ್ಕಾಗಿ ಪ್ರತಿಫಲವಿದೆ ಮತ್ತು ಅದರ ದೋಷವು ಅವನಿಗೇ ಆಗಿದೆ.

وَتَغَافَلْ عَنْ أُمُورٍ إِنَّهُ * لَمْ يَفُزْ بِالْحَمْدِ إِلَّا مَنْ غَفَلْ

**"ಕೆಲವು ವಿಷಯಗಳನ್ನು ಕಡೆಗಣಿಸಿರಿ. ಯಾಕೆಂದರೆ ಕಡೆಗಣಿಸುವವನ ಹೊರತು ಇನ್ನಾರೂ ಸ್ತುತಿಯೊಂದಿಗೆ ಜಯಗಳಿಸಿಲ್ಲ."**

## 2. ಕರೆ ಮಾಡಬೇಕಾದ ಸಮಯ

ನಿಮಗೆ ಕರೆ ಮಾಡಬೇಕಾದ ಅಗತ್ಯ ಬರುವಾಗ ಜನರು ಹಲವು ಕೆಲಸಗಳಲ್ಲಿ ಮತ್ತು ಆವಶ್ಯಕತೆಗಳಲ್ಲಿ ಮಗ್ನರಾಗಿರುತ್ತಾರೆಂಬುದನ್ನು ಅರಿತುಕೊಳ್ಳಿರಿ. ಅವರಿಗೆ ಉಣ್ಣುವ, ಮಲಗುವ, ವಿಶ್ರಾಂತಿ ಪಡೆಯುವ ಸಮಯಗಳಿವೆಯೆಂಬುದನ್ನೂ ಅರಿತುಕೊಳ್ಳಿರಿ. ಅವರು ಈ ಸ್ಥಿತಿಗಳಲ್ಲಿರುವಾಗ ನಿಮ್ಮ ಕರೆಯನ್ನು ಸ್ವೀಕರಿಸದಿರುವ ವಿನಾಯಿತಿಯು ಅವರಿಗಿದೆ. ಇದು ಕೆಲವೊಮ್ಮೆ ಅನಿವಾರ್ಯತೆ ಯಿಂದಾಗಿರಬಹುದು ಅಥವಾ ಕೆಲವೊಮ್ಮೆ ಯಾವುದೋ ಅಗತ್ಯದ ಕಾರಣದಿಂದಾಗಿರಬಹುದು.

ಈ ಕಾರಣದಿಂದಲೇ ಸಂದರ್ಶಿಸಲ್ಪಡುವ ವ್ಯಕ್ತಿಗೆ, ತಾನು ಮನೆಯಲ್ಲಿದ್ದೂ ಸಹ ಮನೆಯಲ್ಲಿಲ್ಲವೆಂದು ಸುಳ್ಳು ಹೇಳಿಸುವುದನ್ನು ಮಾಡದೆಯೇ ತನ್ನನ್ನು ಸಂದರ್ಶನ ಮಾಡಲ್ಪಡುವುದನ್ನು ನಿರಾಕರಿಸುವ ಹಕ್ಕನ್ನು ಶರೀಅತ್ ಆತನಿಗೆ ನೀಡಿದೆ. ಕರೆ ಮಾಡಲ್ಪಡುವ ವ್ಯಕ್ತಿಯ ನಿಯಮವೂ ಇದೇ ಆಗಿದೆ. ಕರೆಯನ್ನು ಸ್ವೀಕರಿಸದಿರುವ ಹಕ್ಕು ಅವನಿಗಿದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿ وَإِنْ قِيلَ لَكُمُ ارْجِعُوا فَارْجِعُوا هُوَ أَزْكَى لَكُمْ ﴾

**"ನಿಮ್ಮೊಂದಿಗೆ 'ಮರಳಿ ಹೋಗಿರಿ' ಎಂದು ಹೇಳಲಾದರೆ ನೀವು ಮರಳಿಹೋಗಿರಿ. ಅದು ನಿಮಗೆ ಅತ್ಯಂತ ಪರಿಶುದ್ಧವಾದುದಾಗಿದೆ." [ಕುರ್‌ಆನ್ 24:28]**

ಆದ್ದರಿಂದ ನೀವು ಕರೆ ಮಾಡುವಾಗ ಆ ವ್ಯಕ್ತಿಯ ಉದ್ಯೋಗ, ಬದ್ಧತೆಗಳನ್ನು ಪರಿಗಣಿಸಿ, ಆ ವ್ಯಕ್ತಿಗಿರುವ ನಿರ್ಬಂಧ ಮತ್ತು ಹೊಣೆಗಾರಿಕೆಗಳನ್ನು ಪರಿಗಣಿಸಿ, ಆ ಕುಟುಂಬದ ನಿದ್ದೆ, ವಿಶ್ರಾಂತಿ ಮತ್ತು ಆಹಾರ ಸೇವನೆಯ ಸಮಯಗಳನ್ನು ಪರಿಗಣಿಸಿ ಸೂಕ್ತ ಸಮಯದಲ್ಲಿ ಕರೆ ಮಾಡಿರಿ.

ಗುಲಾಮರು ಮತ್ತು ಅಪ್ರಾಪ್ತರು ಮೂರು ಸಮಯಗಳಲ್ಲಿ ಅನುಮತಿ ಪಡೆದು ಪ್ರವೇಶಿಸಬೇಕೆಂದು ಶರೀಅತ್ ಅವರಿಗೆ ಆದೇಶಿಸಿರುವುದನ್ನು ನೋಡಿರಿ.

ಒಂದು: ಫಜ್ರ್ ನಮಾಝ್‌ಗೆ ಮುನ್ನ

ಎರಡು: ಮಧ್ಯಾಹ್ನದ ಸಮಯ

ಮೂರು: ಇಶಾ ನಮಾಝ್‌ನ ಬಳಿಕ

ಆದರೆ ಸ್ವತಂತ್ರರೂ ಪ್ರಾಪ್ತರೂ ಆಗಿರುವವರ ಬಗ್ಗೆ ಹೇಳುವುದಾದರೆ ಅವರು ಎಲ್ಲ ಸಮಯಗಳಲ್ಲೂ ಅನುಮತಿ ಪಡೆದೇ ಪ್ರವೇಶಿಸಬೇಕಾಗಿದೆ. ಸೂರಃ ಅನ್ನೂರ್ (58–59)ನಲ್ಲಿ ಇದನ್ನು ವಿವರಿಸಲಾಗಿದೆ.

ರಾತ್ರಿ ಸಮಯದಲ್ಲಿ ಮನೆಯ ಬಾಗಿಲು ತಟ್ಟುವುದನ್ನು ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಅಂದರೆ ದೂರದ ಊರಿಗೆ ಯಾತ್ರೆ ಹೋಗಿರುವವನು ತನ್ನ ಕುಟುಂಬಕ್ಕೆ ತಿಳಿಸದೆಯೇ ರಾತ್ರಿ ಸಮಯದಲ್ಲಿ ಮನೆಗೆ ಹಿಂದಿರುಗುವುದನ್ನು

ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಯಾಕೆಂದರೆ ತನಗೆ ಅಸಹ್ಯತೆಯುಂಟಾಗುವ ಸ್ಥಿತಿಯಲ್ಲಿ ಮತ್ತು ಅಶುದ್ಧ ಸ್ಥಿತಿಯಲ್ಲಿ ತನ್ನ ಕುಟುಂಬದವರನ್ನು ನೋಡಬೇಕಾದ ಪರಿಸ್ಥಿತಿಯು ಇದರಿಂದಾಗಿ ಸಂಜಾತವಾಗುತ್ತದೆ. ಈ ನಿಯಮವಿರುವುದು ಅವನು ಅವರನ್ನು ವಂಚಕರೆಂದು ಆರೋಪಿಸದಿರುವುದಕ್ಕಾಗಿ ಮತ್ತು ಅವರಿಗೆ ಕಿರಿಕಿರಿಯುಂಟು ಮಾಡದಿರುವುದಕ್ಕಾಗಿದೆ.

**ಒಟ್ಟಿನಲ್ಲಿ,** ಸೂಕ್ತ ಸಮಯವನ್ನು ನೋಡಿ ಕರೆ ಮಾಡುವ ಮೂಲಕ ಉತ್ತಮ ವರ್ತನೆಯನ್ನು ತೋರಿಸಿರಿ. ಬೇರೆ ಸಮಯದಲ್ಲಿ ಕರೆ ಮಾಡುವಂತೆ ನಿಮ್ಮೊಂದಿಗೆ ಕೇಳಿಕೊಳ್ಳಲಾದರೆ ಹೃದಯ ವೈಶಾಲ್ಯತೆಯೊಂದಿಗೆ ಅದನ್ನು ಸ್ವೀಕರಿಸಿರಿ.

ಇನ್ನು ನಿಮ್ಮೊಂದಿಗೆ ಕಾಯುವಂತೆ ಹೇಳಲಾದರೆ ನಿಮ್ಮ ಬಳಿ ಸಮಯವಿದ್ದರೆ ಬೇಸರಪಡದೆ ಕಾಯಿರಿ.

* ಸೂಕ್ತ ಸಮಯ ನೋಡಿ ಕರೆ ಮಾಡಬೇಕಾದ ಈ ನಿಯಮವು ದಿನದ ಇಪ್ಪತ್ತನಾಲ್ಕು ತಾಸುಗಳೂ ತೆರೆದುಕೊಂಡಿರುವ ಲಾಡ್ಜ್‌ಗಳು, ಯಾತ್ರಿಗಳ ಬಾಡಿಗೆ ಕೊಠಡಿಗಳು ಮುಂತಾದ ಸಾರ್ವಜನಿಕ ಸ್ಥಳಗಳಿಗೆ ಅನ್ವಯವಾಗುವುದಿಲ್ಲ.

ಅನುಮತಿ ಕೇಳಬೇಕೆಂದು ಹೇಳುವ ಈ ಕೆಳಗಿನ ಆಯತ್ತಿನಿಂದ ಈ ನಿಯಮವನ್ನು ಪಡೆದುಕೊಳ್ಳಲಾಗಿದೆ:

﴿ لَيْسَ عَلَيْكُمْ جُنَاحٌ أَنْ تَدْخُلُوا بُيُوتًا غَيْرَ مَسْكُونَةٍ فِيهَا مَتَاعٌ لَكُمْ وَاللَّهُ يَعْلَمُ مَا تُبْدُونَ وَمَا تَكْتُمُونَ ﴾

**“ಜನರು ವಾಸವಿಲ್ಲದ, ನಿಮ್ಮ ಸರಂಜಾಮುಗಳಿರುವ ಮನೆಗಳನ್ನು ಪ್ರವೇಶಿಸುವುದರಲ್ಲಿ ನಿಮ್ಮ ಮೇಲೆ ದೋಷವಿಲ್ಲ. ನೀವು ಬಹಿರಂಗಪಡಿಸುವುದನ್ನು ಮತ್ತು ಬಚ್ಚಿಡುವುದನ್ನು ಅಲ್ಲಾಹು ಅರಿಯುತ್ತಿದ್ದಾನೆ.” [ಕುರ್‌ಆನ್ 24:29]**

ಈ ಮನೆಗಳು ಅವುಗಳ ಆವಶ್ಯಕತೆಯಿರುವ ಎಲ್ಲ ಜನರೂ ಪ್ರವೇಶಿಸಬಹುದಾದಂತಹ ಮನೆಗಳಾಗಿವೆ. ಇವು ಯಾವುದೋ ಕೆಲವು ಜನರಿಗೆ ಮಾತ್ರ ಸೀಮಿತವಾಗಿರುವಂತದ್ದಲ್ಲ. ಯಾಕೆಂದರೆ ಅವುಗಳಲ್ಲಿ ನಿಮ್ಮ ಸರಂಜಾಮುಗಳಿವೆ. ಸರಂಜಾಮುಗಳು ಎಂದರೆ ಲಾಡ್ಜ್‌ಗಳಲ್ಲಿ, ಯಾತ್ರಿಕ ಕೊಠಡಿಗಳಲ್ಲಿ ರಾತ್ರಿ ಕಳೆಯುವುದು ಇತ್ಯಾದಿ ಪ್ರಯೋಜನಗಳಾಗಿವೆ.

## 3. ಎಷ್ಟು ಸಲ ಕರೆ ಮಾಡಬೇಕು?

ಕರೆ ಮಾಡುವಾಗ ಮಿತತ್ವವನ್ನು ಮತ್ತು ಮಧ್ಯಮ ಸ್ಥಿತಿಯನ್ನು ಪಾಲಿಸಿರಿ. ಒಬ್ಬ ವ್ಯಕ್ತಿಗೆ ಫೋನ್ ರಿಂಗ್ ಆಗುವುದು ಕೇಳಿಸಲು ಎಷ್ಟು ಸಲ ಕರೆ ಮಾಡಬೇಕೋ ಅಷ್ಟು ಸಲ ಮಾತ್ರ ಕರೆ ಮಾಡಿರಿ. ಈ ಕೆಳಗಿನ ಹದೀಸಿನಲ್ಲಿರುವ ಪ್ರಕಾರ ಕರೆ ಮಾಡುವುದನ್ನು ಮೂರು ಸಲಕ್ಕೆ ಸೀಮಿತಗೊಳಿಸಬೇಕೆಂದು ಹೇಳುವುದು ಸರಿಯಲ್ಲ.

« إِذَا اسْتَأْذَنَ أَحَدُكُمْ ثَلَاثًا فَلَمْ يُؤْذَنْ لَهُ فَلْيَنْصَرِفْ »

**“ನಿಮ್ಮಲ್ಲೊಬ್ಬನು ಮೂರು ಸಲ ಅನುಮತಿ ಕೇಳಿಯೂ ಅವನಿಗೆ ಅನುಮತಿ ಸಿಗದಿದ್ದರೆ ಅವನು ಅಲ್ಲಿಂದ ಹೊರಟು ಹೋಗಲಿ.” [ಅಲ್‌ಬುಖಾರಿ ಮತ್ತು ಮುಸ್ಲಿಮ್]**

ಯಾಕೆಂದರೆ ಆ ಹದೀಸಿನಲ್ಲಿ ಹೇಳಲಾದ ಅನುಮತಿ ಕೇಳುವುದರ ಹಿಂದಿರುವ ಹಿಕ್ಮತ್ತನ್ನು ಈ ಕೆಳಗಿನ ಹದೀಸಿನಲ್ಲಿ ಹೀಗೆ ವಿವರಿಸಲಾಗಿದೆ.

« إِنَّمَا جُعِلَ الاِسْتِئْذَانُ مِنْ أَجْلِ الْبَصَرِ »

**“ಅನುಮತಿ ಕೇಳುವುದನ್ನು ನಿಯಮವನ್ನಾಗಿ ಮಾಡಲಾಗಿರುವುದು ದೃಷ್ಟಿಯ ಕಾರಣದಿಂದಾಗಿದೆ. (ಕಣ್ಣಿನ ಸುರಕ್ಷತೆಗಾಗಿದೆ)” [ಅಲ್‌ಬುಖಾರಿ]**

ಆದರೆ ಫೋನ್ ಕರೆಯಲ್ಲಿ ದೃಷ್ಟಿಯ ವಿಷಯವು ಬರುವುದಿಲ್ಲ.

ಆದರೂ ಮಿತಿಮೀರಿ ಕರೆ ಮಾಡುವುದರ ಬಗ್ಗೆ ಎಚ್ಚರ ವಹಿಸಿರಿ. ಕರೆ ಸ್ವೀಕರಿಸುವವನಿಗೆ ಮತ್ತು ಆತನೊಂದಿಗಿರುವವರಿಗೆ ಇದರಿಂದ ತೊಂದರೆಯಾಗಬಹುದು. ಯಾಕೆಂದರೆ ಇದೊಂದು ಹಿಂಸೆ ಮತ್ತು ಪುಂಡ ಪೋಕರಿಗಳ ಕೃತ್ಯವಾಗಿದೆ. ಇದರಿಂದಾಗಿ ಎಷ್ಟೋ ಜನರು ಪರೀಕ್ಷಿಸಲ್ಪಟ್ಟಿದ್ದಾರೆ. ಒಮ್ಮೆ ಒಬ್ಬ ಮಹಿಳೆ ಇಮಾಮ್ ಅಹ್ಮದ್(ﷺ)ರ ಮನೆಗೆ ಹೋಗಿ ಗಟ್ಟಿಯಾಗಿ ಬಾಗಿಲು ತಟ್ಟಿದರು. ಇಮಾಮ್ ಅಹ್ಮದ್ ಹೊರಗೆ ಬಂದು ಇದು ಪೊಲೀಸರು ಬಾಗಿಲು ತಟ್ಟುವ ಶೈಲಿಯಾಗಿದೆಯೆಂದು ಅದನ್ನು ವಿರೋಧಿಸುವ ರೀತಿಯಲ್ಲಿ ಹೇಳಿದರು.

ಸಹಾಬಾಗಳ ಶಿಷ್ಟಾಚಾರದ ಕಡೆಗೆ ನೋಡಿರಿ. ಅವರು ಪ್ರವಾದಿ(ﷺ)ರವರ ಮನೆಯ ಬಾಗಿಲನ್ನು ತಮ್ಮ ಉಗುರುಗಳಿಂದ ತಟ್ಟುತ್ತಿದ್ದರು. [ಅಲ್‌ಬುಖಾರಿ 'ಅಲ್‌ಅದಬುಲ್ ಮುಫ್ರದ್'ನಲ್ಲಿ, ಅಲ್‌ಖತೀಬ್ 'ಅಲ್‌ಜಾಮಿಅ್'ನಲ್ಲಿ ಮತ್ತು ಅಲ್‌ಕುರ್ತುಬೀ ತಮ್ಮ 'ತಫ್ಸೀರ್'ನಲ್ಲಿ (12/217) ಇದನ್ನು ವರದಿ ಮಾಡಿದ್ದಾರೆ]

ನಮ್ಮ ಈ ಕಾಲದಲ್ಲಿ ಬಾಗಿಲುಗಳಲ್ಲಿರುವ ವಿದ್ಯುತ್ ಕರೆಗಂಟೆಗಳೂ ಇದೇ ನಿಯಮವನ್ನು ಹೊಂದಿವೆ. ಅವುಗಳನ್ನು ನಯವಾದ ರೀತಿಯಲ್ಲಿ ಬಳಸಿರಿ. ಹಿಂಸಾತ್ಮಕವಾಗಿ ಅಥವಾ ದೀರ್ಘವಾಗಿ ಒತ್ತಿ ಹಿಡಿಯಬೇಡಿರಿ.

## 4. ಕರೆ ಮಾಡಬೇಕಾದ ಅವಧಿ

ಇದು ವ್ಯಕ್ತಿ ಮತ್ತು ಕಾಲವನ್ನು ಅವಲಂಬಿಸಿಕೊಂಡಿದೆ. ಆದರೆ ದೀರ್ಘ ಸಮಯ ಸಂಭಾಷಣೆ ಮಾಡುತ್ತಾ ಕರೆ ಸ್ವೀಕರಿಸಿದವನಿಗೆ ಬಳಲಿಕೆ, ಆಯಾಸ, ಬೇಸರ ಉಂಟಾಗುವಂತೆ ಅಥವಾ ಚಿಟ್ಟು ಹಿಡಿಯುವಂತೆ ಮಾಡದಿರಿ.

# 5. ಕರೆ ಮಾಡುವುದು ಮತ್ತು ಕೊನೆಗೊಳಿಸುವುದು ಸಲಾಮ್‌ನಿಂದಾಗಿರಬೇಕು

* ಕರೆ ಮಾಡುವವನು ಆಗಮಿಸುವವನಿಗೆ ಸಮವಾಗಿದ್ದಾನೆ. ಆದ್ದರಿಂದ ಕರೆ ಸ್ವೀಕರಿಸಲ್ಪಟ್ಟ ತಕ್ಷಣ ಅವನು ಇಸ್ಲಾಮಿನ ಅಭಿವಂದನೆಯಾದ 'ಅಸ್ಸಲಾಮು ಅಲೈಕುಮ್' ಎಂದು ಹೇಳಬೇಕು. ಇದು ಇಸ್ಲಾಮಿನ ಲಾಂಛನವಾಗಿದೆ ಮತ್ತು ಶಾಂತಿ ಹಾಗೂ ಸುರಕ್ಷತೆಯ ಕೀಲಿಕೈಯಾಗಿದೆ. ಅದು ಮುಹಮ್ಮದ್(ﷺ)ರವರ ಸಮುದಾಯಕ್ಕಿರುವ ಒಂದು ಘನತೆಯಾಗಿದೆ.

ಕರೆ ಸ್ವೀಕರಿಸಿದವನು ಸಲಾಮ್‌ಗೆ ಉತ್ತರಿಸಬೇಕು.

ಮಹತ್ವಪೂರ್ಣವಾದ ಸುನ್ನತ್ತಿನಲ್ಲಿ ಈ ರೀತಿಯಾಗಿ ಬಂದಿದೆ.

ರಿಬ್‌ಈ(ﷺ)ರಿಂದ ವರದಿ: ಅವರು ಹೇಳುತ್ತಾರೆ:

ಬನೂ ಆಮಿರ್‌ನಲ್ಲಿ ಸೇರಿದ ಒಬ್ಬ ವ್ಯಕ್ತಿ ನಮಗೆ ತಿಳಿಸಿದಂತೆ ಒಮ್ಮೆ ಪ್ರವಾದಿ(ﷺ)ರವರು ಒಂದು ಮನೆಯಲ್ಲಿದ್ದಾಗ ಅವರು ಪ್ರವಾದಿ(ﷺ)ರವರ ಬಳಿಗೆ ಬಂದು **'ನಾನು ಒಳಗೆ ಪ್ರವೇಶಿಸಬಹುದೇ?'** ಎಂದು ಅನುಮತಿ ಕೇಳಿದರು. ಆಗ ಪ್ರವಾದಿ(ﷺ)ರವರು ತಮ್ಮ ಸೇವಕನೊಂದಿಗೆ ಹೇಳಿದರು:

« اخْرُجْ إِلَى هَذَا فَعَلِّمْهُ الِاسْتِئْذَانَ فَقُلْ لَهُ قُلْ السَّلَامُ عَلَيْكُمْ أَأَدْخُلُ »

**"ಆ ವ್ಯಕ್ತಿಯ ಬಳಿಗೆ ಹೋಗಿ ಆತನಿಗೆ ಅನುಮತಿ ಕೇಳುವುದು ಹೇಗೆಂದು ಕಲಿಸಿಕೊಡು. 'ಅಸ್ಸಲಾಮು ಅಲೈಕುಮ್, ನಾನು ಒಳಗೆ ಪ್ರವೇಶಿಸಬಹುದೇ?' ಎಂದು ಕೇಳುವಂತೆ ಆತನೊಂದಿಗೆ ಹೇಳು."**

ಇದನ್ನು ಆಲಿಸಿದ ಆ ವ್ಯಕ್ತಿ **‘ಅಸ್ಸಲಾಮು ಅಲೈಕುಮ್, ನಾನು ಪ್ರವೇಶಿಸಬಹುದೇ?’** ಎಂದು ಕೇಳಿದಾಗ ಪ್ರವಾದಿ(ﷺ)ರವರು ಆತನಿಗೆ ಅನುಮತಿ ನೀಡಿದರು. [ಅಬೂ ದಾವೂದ್]

ಮೊಟ್ಟಮೊದಲು ಸಲಾಮ್ ಹೇಳಬೇಕೆಂಬುದನ್ನು ಇದು ಸೂಚಿಸುತ್ತದೆ. ಆದ್ದರಿಂದ ಕರೆ ಮಾಡಿದವನು ಮಾತನಾಡುವುದಕ್ಕೆ ಮೊದಲು ಸಲಾಮ್ ಹೇಳಬೇಕು. ಕರೆ ಸ್ವೀಕರಿಸಿದವನು ಮಾತನಾಡುವ ತನಕ ಮೌನವಾಗಿರಬಾರದು.

* **ಇಲ್ಲಿ ವಿರೋಧಿಸಲ್ಪಟ್ಟಿರುವ ವಿಚಾರವೇನೆಂದರೆ:** ಈ ಅನುಗ್ರಹೀತವಾದ ಇಸ್ಲಾಮೀ ಅಭಿವಂದನೆಯನ್ನು ತೊರೆದು ‘ಗುಡ್ ಮಾರ್ನಿಂಗ್’ ಎಂದು ಹೇಳುವುದರೆಡೆಗೆ ಜನರು ವಾಲಿಕೊಂಡಿರುವುದಾಗಿದೆ.

* **ಇಲ್ಲಿ ವಿರೋಧಿಸಲ್ಪಟ್ಟಿರುವ ಇನ್ನೊಂದು ವಿಚಾರವೇನೆಂದರೆ:** ಕರೆ ಮಾಡುವವರು ಮತ್ತು ಕರೆ ಸ್ವೀಕರಿಸುವವರು ಮೊಟ್ಟಮೊದಲು ‘ಹಲೋ’ ಎಂದು ಹೇಳುವುದು. ಇದರ ಬಗ್ಗೆ ಜನರು ಎಷ್ಟೇ ಅಭಿಪ್ರಾಯ ಹೇಳಿದರೂ ಇದೊಂದು ವಿದೇಶಿ ಪದವಾಗಿದೆ. ಇದೊಂದು ಫ್ರೆಂಚ್ ಪದವಾಗಿದೆ. ಅರಬಿ ಭಾಷೆಯು ಇದನ್ನು ನಿರಾಕರಿಸುತ್ತದೆ. ಇದು ಉಚ್ಚರಿಸಲು ಕಷ್ಟವಾಗಿದೆ.

ಸೌದಿ ಅರೇಬಿಯಾದ ದೂರ ಸಂಪರ್ಕ ಸಂಸ್ಥೆಯು ತಮಗೆ ಕರೆ ಮಾಡಿ ಮಾಹಿತಿ ಪಡೆಯುವವರಿಗೆ ಮೊಟ್ಟಮೊದಲು ಸಲಾಮ್ ಹೇಳುವ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಭಾಗ್ಯವನ್ನು ಪಡೆದುಕೊಂಡಿದೆ. ಇದರಿಂದಾಗಿ ಈ ಗೌರವಾನ್ವಿತ ಇಸ್ಲಾಮೀ ಶಿಷ್ಟಾಚಾರದ ಪ್ರಚಾರವು ಸಾಧ್ಯವಾಗುತ್ತದೆ.

ಹಾಗೆಯೇ ಅನೇಕ ಮುಸ್ಲಿಮ್ ಸಹೋದರರು ತಮಗೆ ಕರೆ ಮಾಡುವವರಿಗಾಗಿ ತಮ್ಮ ಫೋನ್‌ನಲ್ಲಿ ಕೆಲವು ಸಂದೇಶಗಳನ್ನು ಧ್ವನಿಮುದ್ರಣಗೊಳಿಸುವ ಭಾಗ್ಯವನ್ನು ಪಡೆದಿದ್ದಾರೆ.

ಅವರೆಲ್ಲರಿಗೂ ಅಲ್ಲಾಹು ಉತ್ತಮ ಪ್ರತಿಫಲವನ್ನು ನೀಡಲಿ. ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಸರ್ವಸ್ತುತಿ.

* **ಇಲ್ಲಿ ವಿರೋಧಿಸಲ್ಪಡಬೇಕಾದ ಇನ್ನೊಂದು ವಿಚಾರವೇನೆಂದರೆ:** ಕರೆಯನ್ನು ಸ್ವೀಕರಿಸಲಾದರೆ ಕರೆ ಸ್ವೀಕರಿಸಿದವನು ಮಾತನಾಡುವ ತನಕ ಕರೆ ಮಾಡಿದವನು ಮೌನವಾಗಿರುವುದು. ಈ ಕೆಳಗೆ ಹೇಳಲಾದ ಹಲವಾರು ವಿಧಗಳಿಂದ ಇದು ಶಿಷ್ಟಾಚಾರದ ಕೊರತೆಯಾಗಿದೆಯೆಂಬುದು ಯಾರಿಂದಲೂ ಮರೆಯಾಗಿರಲಾರದು.

1. ಅನುಮತಿ ಕೇಳುವವನು ಮತ್ತು ಆಗಮಿಸುವವನು ಸಲಾಮ್‌ನಿಂದ ಆರಂಭಿಸಬೇಕೆಂಬ ಸುನ್ನತ್ತಿನ ನಿರ್ದೇಶನಕ್ಕೆ ಇದು ವಿರುದ್ಧವಾಗಿದೆ.

2. ಕರೆ ಮಾಡುವವನು ಅಗತ್ಯವುಳ್ಳವನಾಗಿದ್ದಾನೆ. ಆದ್ದರಿಂದ ಅವನು ಮೊದಲು ಸಲಾಮ್ ಹೇಳಬೇಕಾಗಿದೆ.

3. ಶಿಷ್ಟಾಚಾರದಲ್ಲಿ ಬಲಹೀನರಾಗಿರುವ ಮತ್ತು ಸಭ್ಯತೆಯಿಲ್ಲದ ಜನರು 'ನೀವು ಅಲ್ಲಿ ಉಪಸ್ಥಿತರಿದ್ದೀರೋ ಅಥವಾ ಇಲ್ಲವೋ' ಎಂದು ತನಿಖೆ ಮಾಡುವುದಕ್ಕಾಗಿ ಮತ್ತು ಅರಿಯುವುದಕ್ಕಾಗಿ ಕರೆ ಮಾಡುತ್ತಾರೆ. ನೀವು ಕರೆ ಸ್ವೀಕರಿಸಿದರೆ ಅವರ ಉದ್ದೇಶವು ಪೂರ್ತಿಯಾಗಿ ಕರೆಯನ್ನು ಕಟ್ ಮಾಡುತ್ತಾರೆ. ಈ ರೀತಿಯ ತನಿಖೆಯು ಕೆಟ್ಟ ವಿಧದಲ್ಲಿರುವ ವಂಚನೆಯಾಗಿದೆ. ಅಲ್ಲಾಹು ಈ ಕ್ರಿಯೆಯನ್ನು ನಿಕೃಷ್ಟಗೊಳಿಸಲಿ ಮತ್ತು ಇದನ್ನು ಮಾಡುವವನನ್ನೂ ನಿಕೃಷ್ಟಗೊಳಿಸಲಿ. ಅವರನ್ನು ವಿಚಾರಣೆ ಮಾಡಬೇಕಾದ ಹೊಣೆಯು ಅಲ್ಲಾಹನದ್ದಾಗಿದೆ.

* ಕರೆ ಸ್ವೀಕರಿಸಿದವನು 'ನೀವು ಯಾರು?' ಎಂದು ಕೇಳಿದರೆ ಇಂತಿಂತಹ ಕುಟುಂಬಕ್ಕೆ ಸೇರಿದ ಇಂತಿಂತಹ ವ್ಯಕ್ತಿಯೆಂದು ಹೇಳಿರಿ. ಅಥವಾ ಅವರಿಗೆ ಸುಪರಿಚಿತವಾಗಿರುವ ನಿಮ್ಮ ಹೆಸರನ್ನು ಹೇಳಿರಿ.

ಮರೆಮಾಚುವಿಕೆಯಿರುವ ಉತ್ತರ ಕೊಡುವುದರ ಬಗ್ಗೆ, ಅಂದರೆ ಉದಾಹರಣೆಗೆ, ನಾನು ನಿನ್ನ ಸ್ನೇಹಿತ, ನಾನು ನಿನ್ನ ನೆರೆಯವ ಮೊದಲಾದ ಉತ್ತರಗಳನ್ನು ಕೊಡುವುದರ ಬಗ್ಗೆ ಎಚ್ಚರ ವಹಿಸಿರಿ.

ಜಾಬಿರ್(ﷺ)ರಿಂದ ವರದಿ: ಅವರು ಹೇಳುತ್ತಾರೆ:

ಒಮ್ಮೆ ನಾನು ಪ್ರವಾದಿ(ﷺ)ರವರೊಂದಿಗೆ ಪ್ರವೇಶಕ್ಕಾಗಿ ಅನುಮತಿ ಕೇಳಿದೆ. ಆಗ ಅವರು ಕೇಳಿದರು: **'ನೀನು ಯಾರು?'** ನಾನು ಹೇಳಿದೆ: **'ನಾನು'**. ಆಗ ಪ್ರವಾದಿ(ﷺ)ರವರು **'ನಾನು ನಾನು'** ಎಂದರು. [ಮುಸ್ಲಿಮ್, ಅಬೂದಾವೂದ್]

ಪ್ರವಾದಿ(ﷺ)ರವರು 'ನಾನು ನಾನು' ಎಂದು ಹೇಳಿದ್ದು ಅಸಹ್ಯಪಡುವ ರೀತಿಯಲ್ಲಾಗಿತ್ತೆಂದು ಅಬೂದಾವೂದ್ ಹೆಚ್ಚುವರಿಯಾಗಿ ವರದಿ ಮಾಡಿದ್ದಾರೆ.

ದೂರ ಪ್ರದೇಶಗಳಿಂದ ಅರಬೀ ಉಪದ್ವೀಪಕ್ಕೆ ಸೋರಿ ಬಂದಿರುವ, ಅಸ್ಪಷ್ಟ ರೀತಿಯಲ್ಲಿ ಪರಿಚಯ ಹೇಳುವ ಒಂದು ವಿಧವೇನೆಂದರೆ: **'ನೀನು ಯಾರು?'** ಎಂದು ಕೇಳಲಾದರೆ ಈತ **'ಇಂತಿಂತಹವನ ಅಪ್ಪ (ಅಬೂ ಫುಲಾನ್)'** ಎಂದು ಹೇಳುವುದಾಗಿದೆ. ಸಲಫ್‌ಗಳ ಮಾರ್ಗದಿಂದ ನಾವು ಇಂತಹ ಒಂದು ಪರಿಚಯ ಹೇಳುವಿಕೆಯನ್ನು ಕಂಡಿಲ್ಲ. ಅವರು ಉಪನಾಮಗಳ (ಕುನ್ಯ) ಮೂಲಕ ಜನರಿಗೆ ತಮ್ಮ ಅಸ್ತಿತ್ವದ ಬಗ್ಗೆ ತಿಳಿಸಿಕೊಡುತ್ತಿದ್ದರು. ಪರಿಚಯ ಹೇಳುವಿಕೆಯು ವಂಶದ ಹೆಸರನ್ನು ಎಳೆದು ತರುವ ಮೂಲಕವಾಗಿರಬೇಕು. ಅಂದರೆ ಇಂತಿಂತಹ ಕುಟುಂಬಕ್ಕೆ ಸೇರಿದ ಇಂತಿಂತಹ ವ್ಯಕ್ತಿಯೆಂದು ಹೇಳುವುದರ ಮೂಲಕವಾಗಿರಬೇಕು.

ಸಲಫ್‌ಗಳು ಉಪನಾಮವನ್ನಿಟ್ಟುಕೊಳ್ಳುತ್ತಿದ್ದುದು ಅಗತ್ಯವಿರುವವರು ಆ ಹೆಸರಿನ ಮೂಲಕ ಅವರನ್ನು ಕರೆಯುವ ಸಲುವಾಗಿತ್ತು.

ಮಾತ್ರವಲ್ಲ, ಅಬೂ ಬಕ್ರ್, ಅಬೂ ದರ್ರ್, ಉಮ್ಮು ಹಾನಿಅ್ ಮೊದಲಾದವರಂತೆ ಕೆಲವೊಮ್ಮೆ 'ಉಪನಾಮ'ವು ಅವರ ನಿಜವಾದ ಹೆಸರಿನ ಸ್ಥಾನದಲ್ಲಿರುತ್ತಿತ್ತು.

* ಇನ್ನು ನೀವು ಕರೆ ಮಾಡಿದಾಗ ನೀವು ಉದ್ದೇಶಿಸಿದ ವ್ಯಕ್ತಿ ಸಿಗದೆ ಬೇರೊಬ್ಬರು ಕರೆ ಸ್ವೀಕರಿಸಿ, **'ನೀನು ಯಾರು?'** ಎಂದು ಕೇಳಿದಾಗ ನಿಮ್ಮ ಹೆಸರನ್ನು ಹೇಳಲು ನಿರಾಕರಿಸುವುದರ ಬಗ್ಗೆ ಎಚ್ಚರ ವಹಿಸಿರಿ. ಇದು

ಶಿಷ್ಟಾಚಾರದಲ್ಲಿರುವ ಕೊರತೆಯಾಗಿದೆ. ಇತರರನ್ನು ತುಚ್ಛವಾಗಿ ಕಾಣುವುದಾಗಿದೆ. ಇತರರಿಗೆ ವೃಥಾ ತೊಂದರೆ ಕೊಡುವುದಾಗಿದೆ.

## 6. ಫೋನ್ ಸಂಭಾಷಣೆಯನ್ನು ಸಲಾಮ್‌ನಿಂದ ಕೊನೆಗೊಳಿಸುವುದು

ಫೋನ್ ಸಂಭಾಷಣೆಯನ್ನು ಇಸ್ಲಾಮಿನ ಅಭಿವಂದನೆಯಿಂದ ಆರಂಭಿಸಿ ದಂತೆಯೇ ಸಲಾಮ್ ಹೇಳುವ ಮೂಲಕ ಇಸ್ಲಾಮಿನ ಲಾಂಛನದಿಂದಲೇ ಕೊನೆಗೊಳಿಸಬೇಕು.

ಅಬೂ ಹುರೈರಾ(ﷺ)ರಿಂದ ವರದಿ: ಅವರು ಹೇಳುತ್ತಾರೆ:

ಪ್ರವಾದಿ(ﷺ)ರವರು ಹೇಳಿದರು:

« إِذَا انْتَهَى أَحَدُكُمْ إِلَى الْمَجْلِسِ فَلْيُسَلِّمْ، فَإِذَا أَرَادَ أَنْ يَقُومَ فَلْيُسَلِّمْ، فَلَيْسَتِ الْأُولَى بِأَحَقَّ مِنَ الْآخِرَةِ »

**“ನಿಮ್ಮಲ್ಲೊಬ್ಬನು ಸಭೆಯನ್ನು ಪ್ರವೇಶಿಸುವುದಾದರೆ ಅವನು ಸಲಾಮ್ ಹೇಳಲಿ ಮತ್ತು ಅವನು ಸಭೆಯಿಂದ ಹೊರಡುವುದಾದರೆ ಅವನು ಸಲಾಮ್ ಹೇಳಲಿ. ಮೊದಲನೆಯ ಸಲಾಮ್ ಎರಡನೆಯ ಸಲಾಮ್‌ಗಿಂತಲೂ ಹೆಚ್ಚು ಹಕ್ಕುಳ್ಳದ್ದಲ್ಲ.” [ಅಬೂ ದಾವೂದ್]**

## 7. ಧ್ವನಿಯನ್ನು ತಗ್ಗಿಸುವುದು

ಸಂಭಾಷಣೆ ಮಾಡುವಾಗ ಮತ್ತು ಮಾತನಾಡುವಾಗ ಪಾಲಿಸಬೇಕಾದ ಸಾರ್ವತ್ರಿಕ ಶಿಷ್ಟಾಚಾರವಾದ **'ತಗ್ಗಿದ ಧ್ವನಿಯಲ್ಲಿ ಮಾತನಾಡುವ'** ಶಿಷ್ಟಾಚಾರಕ್ಕೆ ಬದ್ಧರಾಗಿರಿ. ಫೋನಿನಲ್ಲಿ ನಿಮ್ಮ ಧ್ವನಿಯು ಮೆತ್ತಗೆಯೂ, ನಿಮ್ಮೊಂದಿಗೆ ಮಾತನಾಡುವವನಿಗೆ ಕೇಳಿಸುವಂತೆ ಮಧ್ಯಮ ಸ್ಥಿತಿಯಲ್ಲೂ ಆಗಿರಲಿ. ಆತನಿಗೆ ಕಿರಿಕಿರಿಯಾಗುವ ರೀತಿಯಲ್ಲಿ ಗಟ್ಟಿಯಾಗಿಯೋ, ಅಥವಾ ಆತನಿಗೆ ಕೇಳಿಸದಷ್ಟು ಮೆತ್ತಗೆಯೋ ಆಗದಿರಲಿ.

ನಿಮ್ಮ ಮಾತಾಪಿತರೊಂದಿಗೆ, ಘನತೆ ಮತ್ತು ಸ್ಥಾನದಲ್ಲಿ ಅವರ ಪದವಿಯಲ್ಲಿರುವರೊಂದಿಗೆ, ನಿಮ್ಮ ಸಮವಯಸ್ಕರೊಂದಿಗೆ, ಪ್ರಾಯದಲ್ಲಿ ಅಥವಾ ಪದವಿಯಲ್ಲಿ ನಿಮಗಿಂತ ಕಿರಿಯರೊಂದಿಗೆ ಮಾತನಾಡುವಾಗ ಅತ್ಯಧಿಕ ಶಿಷ್ಟಾಚಾರ ಪಾಲಿಸಿ ಮಾತನಾಡಿರಿ. ಅವರನ್ನು ಸಂತೋಷಪಡಿಸಿರಿ. ನೀವು ಅವರಿಗೆ ಗೌರವ ಕೊಡುತ್ತೀರಿ ಎಂಬ ಭಾವನೆಯು ಅವರಲ್ಲುಂಟಾಗುವಂತೆ ಮಾಡಿರಿ. ಇದರಿಂದಾಗಿ ನಿಮಗೆ ಅನೇಕ ಗೆಳೆಯರು ಮತ್ತು ಆಪ್ತರು ಉಂಟಾಗುವರು.

ಅಗತ್ಯಕ್ಕಿಂತ ಹೆಚ್ಚು ಧ್ವನಿಯೆತ್ತಿ ಮಾತನಾಡುವುದರ ಬಗ್ಗೆ ಎಚ್ಚರ ವಹಿಸಿರಿ. ಹಾಗೆಯೇ ಅಗತ್ಯಕ್ಕಿಂತ ಕಮ್ಮಿ ಧ್ವನಿ ತಗ್ಗಿಸಿ ಮಾತನಾಡುವುದರ ಬಗ್ಗೆಯೂ ಎಚ್ಚರ ವಹಿಸಿರಿ. ಯಾಕೆಂದರೆ ಇವೆರಡೂ ಅಲ್ಲಾಹು ನಿಮಗೆ ಕಲಿಸಿಕೊಟ್ಟ ಶಿಷ್ಟಾಚಾರಗಳಲ್ಲಿ ಅಪೂರ್ಣತೆಯನ್ನು ತೋರಿಸುವುದಾಗಿದೆ. ಲುಕ್ಮಾನ್ ತಮ್ಮ ಮಗನಿಗೆ ನೀಡ ಉಪದೇಶಗಳನ್ನು ಉದ್ಧರಿಸುತ್ತಾ ಅಲ್ಲಾಹು ಹೇಳುತ್ತಾನೆ:

﴿ وَاغْضُضْ مِنْ صَوْتِكَ﴾

**"ನಿನ್ನ ಧ್ವನಿಯನ್ನು ಸ್ವಲ್ಪ ತಗ್ಗಿಸು." [ಕುರ್‌ಆನ್ 31:19]**

ಒಬ್ಬ ಮುಸ್ಲಿಮನಿಗೆ ಹೊಂದಿಕೊಳ್ಳದಂತಹ ರೀತಿಯಲ್ಲಿ ಜನರು ಮಾತನಾಡುವ ಎಷ್ಟೊಂದು ಉದಾಹರಣೆಗಳಿವೆ. ಇದು ನೀವು ಯಾರೊಂದಿಗೆ ಮಾತನಾಡುತ್ತಿರುವಿರೋ ಅವರೊಂದಿಗೆ ನಿಮಗಿರುವ ಅಗೌರವವನ್ನು ತೋರಿಸುತ್ತದೆ. ಫೋನ್ ಸಂಭಾಷಣೆಯ ಕಾರಣದಿಂದಾಗಿ ಅದೆಷ್ಟೋ ಜನರ ಅಗತ್ಯಗಳು

ಪೂರೈಕೆಯಾಗದೆ ಉಳಿದಿವೆ ಮತ್ತು ಒಳಿತುಗಳು ಅವರಿಗೆ ದಕ್ಕದೆ ತಡೆಹಿಡಿಯಲಾಗಿದೆ!

* ಸ್ವಪ್ರಶಂಸೆಯ ಅಸಹ್ಯ ಮಾತುಗಳನ್ನು ಆಡುತ್ತಾ ಫೋನಿನ ಮೂಲಕ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸುವ ಆತ್ಮಪ್ರಶಂಸಕರ ದಾರಿಯನ್ನು ಅನುಸರಿಸುವುದರ ಬಗ್ಗೆಯೂ ಎಚ್ಚರ ವಹಿಸಿರಿ.

## 8. ಫೋನ್ ಮತ್ತು ಮಹಿಳೆಯರು

ಕರೆ ಮಾಡುವ ಯಾ ಕರೆ ಸ್ವೀಕರಿಸುವ ವ್ಯಕ್ತಿ ಮಹಿಳೆಯಾಗಿದ್ದರೆ ನಯವಾಗಿ ಮಾತನಾಡುವ ಬಗ್ಗೆ ಆಕೆ ಎಚ್ಚರವಹಿಸಲಿ. ಅಲ್ಲಾಹು ಪ್ರವಾದಿ(ﷺ)ರವರ ಪತ್ನಿಯರಿಗೆ, ಅಂದರೆ ವಿಶ್ವಾಸಿಗಳ ತಾಯಂದಿರಿಗೆ, ಅವರ ಬಗ್ಗೆ ಯಾರೂ ಬಯಕೆಯನ್ನು ಇಟ್ಟುಕೊಳ್ಳದಿದ್ದರೂ ಸಹ, ಅವರು ಪ್ರವಾದಿಯ ಕಾಲದಲ್ಲಿ ಮತ್ತು ಸಹಾಬಾಗಳ ಕಾಲದಲ್ಲಿ ಬದುಕಿದ್ದವರಾಗಿದ್ದೂ ಸಹ, ನಯವಾಗಿ ಮಾತನಾಡುವುದನ್ನು ಅಲ್ಲಾಹು ಅವರಿಗೆ ವಿರೋಧಿಸಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿ فَلَا تَخْضَعْنَ بِالْقَوْلِ فَيَطْمَعَ الَّذِي فِي قَلْبِهِ مَرَضٌ وَقُلْنَ قَوْلًا مَعْرُوفًا ﴾

**"ನೀವು ನಯವಾಗಿ ಮಾತನಾಡಬಾರದು. ಹಾಗೆ ಮಾತನಾಡಿದರೆ ಹೃದಯದಲ್ಲಿ ರೋಗವಿರುವವನಿಗೆ ಬಯಕೆಯುಂಟಾಗಬಹುದು. ನೀವು ಸದಾಚಾರದಿಂದ ಕೂಡಿದ ಮಾತುಗಳನ್ನಾಡಿರಿ." [ಕುರ್‌ಆನ್ 33:32]**

ಪ್ರವಾದಿ(ﷺ)ರವರ ಪತ್ನಿಯರೊಂದಿಗೆ ಹೀಗೆ ಆದೇಶಿಸಲಾಗಿರುವಾಗ ಇತರ ಮಹಿಳೆಯರ ಸ್ಥಿತಿಯೇನು? ಇತರ ಮಹಿಳೆಯರು ಈ ವಿರೋಧಕ್ಕೆ ಹೆಚ್ಚು ಅರ್ಹರಾಗಿದ್ದಾರೆ. ಆದ್ದರಿಂದ ಓ ವಿಶ್ವಾಸಿ ಮಹಿಳೆಯರೇ, ನೀವು ಅಲ್ಲಾಹನನ್ನು

ಭಯಪಡಿರಿ. ನೀವು ನಯವಾಗಿ ಮಾತನಾಡಬಾರದು. ಬದಲಾಗಿ ನ್ಯಾಯೋಚಿತವಾದ ಸದಾಚಾರದಿಂದ ಕೂಡಿದ ಮಾತುಗಳನ್ನಾಡಿರಿ. ಅಂದರೆ ಇಂಪಾಗಿ, ಅಥವಾ ರಾಗವಾಗಿ ಮಾತನಾಡದಿರಿ. ಮಹಿಳೆಯು ತನ್ನ ಪತಿಯೊಂದಿಗೆ ಮಾತನಾಡುವಂತೆ ಅನ್ಯ ಪುರುಷರೊಂದಿಗೆ ಮಾತನಾಡಬಾರದು.

* ಅನ್ಯ ಪುರುಷರೊಂದಿಗೆ ಅಪರಿಮಿತವಾಗಿ ಮಾತನಾಡುವುದರ ಬಗ್ಗೆ ಮಹಿಳೆಯರು ಎಚ್ಚರ ಎಚ್ಚರವಹಿಸಬೇಕು. ಮಾತ್ರವಲ್ಲ ಮಹ್ರಮ್‌ಗಳೊಂದಿಗೆ ಮಾತನಾಡುವಾಗಲೂ ಕೂಡ. ಯಾಕೆಂದರೆ ಶರೀಅತ್ ಇದನ್ನು ವಿರೋಧಿಸಿದೆ. ಯಾಕೆಂದರೆ ಹೀಗೆ ಮಾತನಾಡುವುದರಿಂದ ಅವರ ಮನಸ್ಸಿನಲ್ಲಿ ಆಕೆಯ ಬಗ್ಗೆ ಭಾವನೆಗಳುಂಟಾಗಲು ಕಾರಣವಾಗುತ್ತದೆ.

* ಅಗತ್ಯಕ್ಕಿಂತ ಹೆಚ್ಚು ಧ್ವನಿಯನ್ನು ಎತ್ತುವುದು, ರಾಗವಾಗಿ ಮಾತನಾಡುವುದು, ಇಂಪಾಗಿ ಮತ್ತು ನಯವಾಗಿ ಮಾತನಾಡುವುದು, ನುಣುಪಾಗಿ ಮಾತನಾಡುವುದು, ವಯ್ಯಾರದಿಂದ ಮಾತನಾಡುವುದು ಇತ್ಯಾದಿಗಳ ಬಗ್ಗೆ ಮಹಿಳೆಯರು ಎಚ್ಚರವಹಿಸಬೇಕಾಗಿದೆ.

* ಮೇಲೆ ಹೇಳಲಾದ ರೀತಿಯಲ್ಲಿ ಮಾತನಾಡುವುದು ಮಹಿಳೆಯರಿಗೆ ನಿಷಿದ್ಧವಾಗಿದ್ದರೆ, ಅಂತಹ ಮಾತುಗಳನ್ನು ಆಲಿಸುತ್ತಾ ಮಜ ಪಡೆಯುವುದು ಪುರುಷರಿಗೂ ನಿಷಿದ್ಧವಾಗಿದೆ. ಅದು ಮಹಿಳೆ ಕುರ್‌ಆನ್ ಪಾರಾಯಣ ಮಾಡುವ ಶಬ್ದವಾಗಿದ್ದರೂ ಸರಿ. ಮಹಿಳೆಗೆ ಇದು ಅನುಭವವಾದರೆ ಆಕೆ ಆತನೊಂದಿಗೆ ಮಾತನಾಡುವುದನ್ನು ಮುಂದುವರಿಸುವುದು ನಿಷಿದ್ಧವಾಗಿದೆ. ಯಾಕೆಂದರೆ ಅದು ಫಿತ್ನದೆಡೆಗೆ ಒಯ್ಯುವ ಸಂಭವವಿದೆ.

ಕುಟುಂಬದವರನ್ನು ಸಂರಕ್ಷಿಸುವ ಹೊಣೆಯನ್ನು ಹೊತ್ತಿರುವ ಮನೆಯ ಯಜಮಾನನಾಗಿರುವ ಪುರುಷನು ತನ್ನ ಕುಟುಂಬದ ಮಹಿಳೆಯರು ಪರದೆಯ ಹಿಂದೆ ಇರುವಂತೆ ನೋಡಿಕೊಳ್ಳಬೇಕು. ಅವರನ್ನು ನಿಷಿದ್ಧ ಕೃತ್ಯಗಳಿಂದ ಸಂರಕ್ಷಿಸಬೇಕು. ಮನೆಯಲ್ಲಿ ಫೋನ್ ಮೊಳಗುವಾಗ ಮನೆಯಲ್ಲಿ ಪುರುಷರಿದ್ದರೂ ಸಹ ಅದನ್ನು ಎತ್ತಿಕೊಳ್ಳುವ ಪ್ರಥಮ ವ್ಯಕ್ತಿ ಮಹಿಳೆಯಾಗಿರಬಾರದು. ಪುರುಷರ ಅನುಪಸ್ಥಿತಿಯಲ್ಲಿ ಆಕೆ ಪ್ರತಿ ಸಂದರ್ಭಗಳಲ್ಲೂ ಫೋನೆತ್ತಬಾರದು.

ಬದಲಾಗಿ ಸಂದರ್ಭ ಮತ್ತು ಅಗತ್ಯಕ್ಕೆ ತಕ್ಕಂತೆ ಆಕೆ ಫೋನೆತ್ತಿ ಮಾತನಾಡಬೇಕು. ಸದಾಚಾರದ ವಿಷಯದಲ್ಲಿ, ಹೊಣೆಗಾರಿಕೆಯನ್ನು ನಿಭಾಯಿಸುವ ವಿಷಯದಲ್ಲಿ ಮತ್ತು ವಿರೋಧವನ್ನು ತೊರೆಯುವ ವಿಷಯದಲ್ಲಿ ಆಕೆ ಪತಿಯ ಆಜ್ಞೆಗಳನ್ನು ಪಾಲಿಸಬೇಕು ಮತ್ತು ಅವನನ್ನು ಅನುಸರಿಸಬೇಕು.

## 9. ಜನರಿಗೆ ಅವರ ಸ್ಥಾನಮಾನವನ್ನು ನೀಡುವುದು

ನೀವು ಫೋನಿನಲ್ಲಿ ಯಾರೊಂದಿಗೆ ಮಾತನಾಡುತ್ತಿರುವಿರೋ ಅವರೊಂದಿಗೆ ಮಾತನಾಡುವಾಗ ಅವರ ಸ್ಥಾನಮಾನ, ವಯಸ್ಸು, ಘನತೆ, ಸಂಬಂಧ ಇತ್ಯಾದಿಗಳನ್ನು ಪರಿಗಣಿಸಿ ಅವರೊಂದಿಗೆ ಶಿಷ್ಟಾಚಾರವನ್ನು ಪಾಲಿಸಿರಿ. ಪ್ರತ್ಯೇಕವಾಗಿ ನೀವು ಮಾತನಾಡುತ್ತಿರುವ ವ್ಯಕ್ತಿ ತಾನು ಕಲಿತ ಇಲ್ಮ್‌ನ ಪ್ರಕಾರ ಅಮಲ್ ಮಾಡುವ ಆಲಿಮ್ ಆಗಿದ್ದರೆ.

ಆಯಿಶಾ(ﷺ)ರಿಂದ ವರದಿಯಾದ ಹದೀಸಿನ್ನಲ್ಲಿ ಪ್ರವಾದಿ(ﷺ)ರವರು ಹೇಳಿದರು:

« أَنْزِلُوا النَّاسَ مَنَازِلَهُمْ »

**“ಜನರಿಗೆ, ಅವರ ಸ್ಥಾನಮಾನಗಳನ್ನು ನೀಡಿರಿ.” [ಅಬೂ ದಾವೂದ್]**

ಉಬಾದಃ ಇಬ್ನು ಸ್ವಾಮಿತ್(ﷺ)ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳಿದರು:

« لَيْسَ مِنَّا مَنْ لَمْ يُوَقِّرْ كَبِيرَنَا وَيَرْحَمْ صَغِيرَنَا وَيَعْرِفْ لِعَالِمِنَا حَقَّهُ »

**“ಹಿರಿಯರನ್ನು ಗೌರವಿಸದವರು, ಕಿರಿಯರ ಮೇಲೆ ದಯೆ ತೋರಿಸದವರು ಮತ್ತು ವಿದ್ವಾಂಸರಿಗಿರುವ ಹಕ್ಕನ್ನು ಅರಿಯದವರು ನಮ್ಮವರಲ್ಲ.” [ಅಹ್ಮದ್]**

ಇಲ್ಲಿ ವಿಷಯದ ಶಿಖರವು 'ಇಸ್ಲಾಮ್' ಆಗಿದೆ. ಜನರು ಅದರ ಕೆಳಗೆ ಅವರ ಆಜ್ಞಾಪಾಲನೆ, ಆಜ್ಞೋಲ್ಲಂಘನೆ, ಪ್ರಮಾದಪೂರಿತ ಮತ್ತು ಹಗುರವಾದ ಅನಾಚಾರ, ಇತ್ಯಾದಿಗಳಿಗೆ ಅನುಗುಣವಾಗಿ ವ್ಯತ್ಯಸ್ತ ಸ್ಥಾನ ಮತ್ತು ಪದವಿಗಳನ್ನು ಹೊಂದಿದವರಾಗಿದ್ದಾರೆ.

ಇನ್ನು ಅವಿಶ್ವಾಸಿಗಳ ಬಗ್ಗೆ ಹೇಳುವುದಾದರೆ, ಸಲಾಮ್ ಹೇಳುವ ವಿಷಯದಲ್ಲಿ, ಅವರೊಂದಿಗೆ ಎಷ್ಟು ಮಾತನಾಡಬೇಕೆಂಬ ವಿಷಯದಲ್ಲಿ ಇತ್ಯಾದಿ ಅವರೊಂದಿಗೆ ವರ್ತಿಸಬೇಕಾದ ರೀತಿಯಲ್ಲೇ ವರ್ತಿಸಬೇಕಾಗಿದೆ.

ಒಟ್ಟಿನಲ್ಲಿ, ಮುಸ್ಲಿಮನಲ್ಲಿರಬೇಕಾದ ಪ್ರತಾಪವು ನಿಮ್ಮಲ್ಲಿರಲಿ. ಅಹಂಭಾವ, ವಿಕರ್ಷಣೆ, ಪರಿಗಣನಾತ್ಮಕವಾದ ಶರಈ ಸತ್ಯವನ್ನು ಅದುಮಿಡುವುದು ಮೊದಲಾದವುಗಳು ನಿಮ್ಮಲ್ಲಿರಬಾರದು.

* ನಿಮ್ಮ ಗೆಳೆಯನೊಬ್ಬ ನಿಮ್ಮೊಂದಿಗೆ ಮಾತನಾಡುವಾಗ ಆತ ರೂಢಿಗಿಂತಲೂ ಕಮ್ಮಿ ಗೌರವ ನೀಡಿ ಮಾತನಾಡುತ್ತಿದ್ದಾನೆಂದು ನಿಮಗೆ ಅನುಭವವಾದರೆ, ಆತನ ಮೇಲೆ ರೇಗಾಡುವಂತೆ ಅದು ನಿಮ್ಮ ಮೇಲೆ ಪರಿಣಾಮ ಬೀರದಿರಲಿ. ಆತ ಹಾಗೆ ಮಾಡಲು ಕಾರಣವಿರಬಹುದೆಂದು ನಿಮ್ಮ ಮನಸ್ಸಿನಲ್ಲಿ ಭಾವಿಸಿರಿ. ಬಹುಷಃ ಆತನಿಗೆ ಹೆಚ್ಚು ಪ್ರಾಮುಖ್ಯತೆಯಿರುವ ಇತರ ಪ್ರಮುಖ ವಿಷಯ ಗಳಿರಬಹುದು. ಅಥವಾ ಆತನ ಮನಸ್ಥಿತಿ ಸರಿಯಿಲ್ಲದಿರಬಹುದು. ಅಥವಾ ಆತನ ಬದುಕಿನಲ್ಲಿ ಯಾವುದೋ ಅನರ್ಥವುಂಟಾಗಿರಬಹುದು. ಆದ್ದರಿಂದ ನೀವು ಆತನ ಬಗ್ಗೆ ಸದ್ಭಾವನೆಯನ್ನಿಟ್ಟುಕೊಳ್ಳಿರಿ. ಅಲ್ಲಾಹು ನಿಮ್ಮನ್ನು ಕಾಪಾಡಲಿ. ಇನ್ನು ಆತ ಬೇಕೆಂದೇ ಅಗೌರವದಿಂದ ಮಾತನಾಡುತ್ತಿದ್ದಾನೆಂದು ನಿಮಗೆ ಸ್ಪಷ್ಟವಾಗಿ ಮನದಟ್ಟಾದರೆ —ವಸ್ವಾಸ್‌ನಿಂದಾಗಿ ಅಲ್ಲ– ನೀವು ನಗುನಗುತ್ತಾ ಇರಿ. ಅಲ್ಲಾಹು ನಿಮ್ಮನ್ನು ಕಾಪಾಡಲಿ.

* ನಿಮ್ಮ ಮನೆಯಲ್ಲಿ ಹಲವಾರು ಮಂದಿ ಮಾತನಾಡುತ್ತಿರುವಾಗ, ಮಕ್ಕಳು ಕಿರುಚುತ್ತಿರುವಾಗ ನೀವು ಯಾರಿಗೂ ಫೋನ್ ಮಾಡಲು ಹೋಗಬೇಡಿ. ಸಂರಕ್ಷಿಸುವುದು, ರಹಸ್ಯಗಳನ್ನು ಕಾಪಾಡುವುದು, ಉದಾತ್ತತೆಯನ್ನು

ಪ್ರದರ್ಶಿಸುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ. ನೀವು ಫೋನಿನಲ್ಲಿ ಮಾತನಾಡುವ ವ್ಯಕ್ತಿಯೊಂದಿಗೆ ನಿಮಗಿರುವ ಸಲುಗೆಯು ಆತನೊಂದಿಗೆ ಅಸಭ್ಯವಾಗಿ ವರ್ತಿಸುವಂತೆ ನಿಮ್ಮನ್ನು ಪ್ರೇರೇಪಿಸದಿರಲಿ.

* ನಿಮಗೆ ಆತನೊಂದಿಗಿರುವ ಸಲುಗೆಯು ಮತ್ತು ಸ್ನೇಹದ ಶಕ್ತಿಯು ಗಟ್ಟಿಯಾಗಿ ಅಬ್ಬರಿಸಿ ನಗುವಂತೆ, ಕೀಳ್ಮಟ್ಟದಲ್ಲಿ ಮಾತನಾಡುವಂತೆ, ಅಸಭ್ಯವಾಗಿ ವರ್ತಿಸುವಂತೆ ನಿಮ್ಮನ್ನು ಪ್ರೇರೇಪಿಸದಿರಲಿ. ಯಾಕೆಂದರೆ ನೀವು ಬೇರೆಯವರೊಂದಿಗೆ ಹೀಗೆಯೇ ವರ್ತಿಸುವಂತೆ ಇದು ನಿಮ್ಮನ್ನು ಒಯ್ದು, ಕೊನೆಗೆ ನಿಮ್ಮನ್ನು ಗುರುತುಹಚ್ಚುವ ನಿಮ್ಮ ಒಂದು ಸ್ವಭಾವವಾಗಿ ಅದು ಮಾರ್ಪಡುವ ಸಾಧ್ಯತೆಯಿದೆ.

## 10. ಕರೆ ಎತ್ತುವುದನ್ನು ಕಾಯುವ ಸಮಯ

(ಅಂದರೆ ನಿಮಗೆ ಯಾರಾದರೂ ಕರೆ ಮಾಡಿದರೆ ನೀವು ಕರೆಯನ್ನು ಸ್ವೀಕರಿಸುವ ತನಕ ಅವರು ಕಾಯುವ ಸಮಯ.) ಜನರು ಈ ವಿಷಯದಲ್ಲಿ ಎರಡು ವಿರುದ್ಧ ತುದಿಗಳಲ್ಲಿದ್ದಾರೆ. ಕೆಲವರು ಈ ಸಮಯದಲ್ಲಿ ಕರೆ ಮಾಡಿದವನಿಗೆ ಕೇಳಿಸುವುದಕ್ಕಾಗಿ ಅದರಲ್ಲಿ ಹಾಡು ಅಥವಾ ಸಂಗೀತವನ್ನು ಅಳವಡಿಸುತ್ತಾರೆ. ಇದು ನಿಷಿದ್ಧವಾಗಿದೆ ಎಂಬ ವಿಷಯದಲ್ಲಿ ಎರಡಭಿಪ್ರಾಯ ವಿಲ್ಲ.

ಇನ್ನು ಕೆಲವರು ಅದಕ್ಕೆ ಕುರ್‌ಆನ್ ಪಾರಾಯಣ, ದಿಕ್ರ್ ಇತ್ಯಾದಿಗಳನ್ನು ಅಳವಡಿಸುತ್ತಾರೆ. ನಿಮ್ಮ ಉದ್ದೇಶ ಶುದ್ಧಿಯು ಈ ಕಾರ್ಯವನ್ನು ಸಮ್ಮತಾರ್ಹ ಗೊಳಿಸುವುದಿಲ್ಲ. ಯಾಕೆಂದರೆ ಕುರ್‌ಆನ್ ಪಾರಾಯಣದ ನಿಯಮ ಪ್ರಕಾರ ಕುರ್‌ಆನ್ ಪಾರಾಯಣವನ್ನು ಆಯತ್‌ಗಳ ತಲೆಭಾಗದಲ್ಲಿ ಅಥವಾ ವಿರಾಮ ಚಿಹ್ನೆಯಿರುವ ಕಡೆ ಮಾತ್ರ ನಿಲ್ಲಿಸಬೇಕಾಗಿದೆ. ಆದರೆ ನೀವು ಕರೆ ಸ್ವೀಕರಿಸುವಾಗ

ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ಶರೀಅತ್‌ನ ಪ್ರಕಾರ ತೃಪ್ತಿಕರವಲ್ಲದ ಸ್ಥಳಗಳಲ್ಲಿ ಆಯತ್‌ಗಳನ್ನು ನಿಲ್ಲಿಸಬೇಕಾಗಿ ಬರುತ್ತದೆ.

ಈ ಕಾರಣದಿಂದ ಇವೆರಡನ್ನೂ ಅಳವಡಿಸಬಾರದು. ನಿಮಗೆ ಕರೆ ಮಾಡಿದವನು ನೀವು ಕರೆ ಸ್ವೀಕರಿಸುವ ತನಕ ಹಾಗೆಯೇ ಮೌನವಾಗಿ ಕಾಯುತ್ತಿರಲಿ. ಇದರಲ್ಲೇನು ತೊಂದರೆ? ಸಮ್ಮತಾರ್ಹವಲ್ಲದಂತಹ ವಿಷಯಗಳನ್ನು ಎಳೆದು ತರುವ ಇಂತಹ ಭಾವನೆಗಳನ್ನು ಸಂರಕ್ಷಿಸುವ ವಿಷಯದಲ್ಲಿ ಮಗ್ನರಾಗುವುದು, ಇವುಗಳಿಗೆ ಅತಿ ಪ್ರಾಮುಖ್ಯತೆ ನೀಡುವುದು ಬೇಕಾಗಿಲ್ಲ.

* ವಿಶ್ವಾಸಾರ್ಹತೆಯ ಸಂರಕ್ಷಣೆಯು ಒಳಿತಿನ ಸಂರಕ್ಷಣೆಯಲ್ಲಿ ಒಳಪಟ್ಟದ್ದಾಗಿದೆ. ಆದ್ದರಿಂದ ಪ್ರತಿಯೊಂದು ಫೋನಿಗೂ ಅದರ ಕೆಲಸವನ್ನು ಮಾತ್ರ ನೀಡಿರಿ. ನೀವು ಕೆಲಸ ಮಾಡುತ್ತಿರುವ ನಿಮ್ಮ ಕಛೇರಿಯ ಫೋನನ್ನು ನಿಮ್ಮ ಖಾಸಗಿ ಉದ್ದೇಶಕ್ಕಾಗಿ ಅಥವಾ ನಿಮ್ಮ ಕಾರ್ಯಸಾಧನೆಗಾಗಿ ಬಳಸದಿರಿ. ಇದು ಮೂಲ ನಿಯಮವಾಗಿದೆ. ಜನರು ಈ ವಿಷಯದಲ್ಲಿ ಹಲವಾರು ಸ್ಥಿತಿಗಳಲ್ಲಿದ್ದಾರೆ. ಈ ನಿಯಮವಿರುವುದು ಒಳಿತಿನ ಸಂರಕ್ಷಣೆಗಾಗಿದೆ.

## 11. ಇತರರ ಫೋನನ್ನು ಬಳಸುವುದು

ನಿಮಗೆ ಸಾಧ್ಯವಾದಷ್ಟು ಇತರರ ಫೋನನ್ನು ಬಳಸದಿರಲು ಪ್ರಯತ್ನಿಸಿರಿ. ನಿಮಗೆ ಬಳಸಲೇ ಬೇಕಾಗಿ ಬಂದರೆ ಅವರೊಂದಿಗೆ ಅನುಮತಿ ಕೇಳಿ ಬಳಸಿರಿ. ಆರ್ಥಿಕವಾಗಿ ನಿಮಗಿಂತಲೂ ಕೆಳಗಿನಲ್ಲಿರುವವರೊಂದಿಗೆ, ಅಥವಾ ನೀವು ಕೇಳಿದಾಗ ಫೋನ್ ಕೊಡಲು ನಿರ್ಬಂಧಿತರಾಗಿರುವವರೊಂದಿಗೆ ಫೋನ್ ಕೇಳಿ ಪಡೆಯದಿರಿ. ಯಾಕೆಂದರೆ ಬಹುಶಃ ಅವರು ನಿಮಗೆ ಅನುಮತಿ ಕೊಡುವುದು ಒಲ್ಲದ ಮನಸ್ಸಿನಿಂದಾಗಿರಬಹುದು.

# 12. ಫೋನ್ ಮತ್ತು ಮನೆಯವರು

وَإِذَا تَأَمَّلْتَ الْبِقَاعَ رَأَيْتَهَا * تَشْقَى كَمَا تَشْقَى الرِّجَالُ وَتَسْعَدُ

**“ಕೆಲವು ಪ್ರದೇಶಗಳ ಬಗ್ಗೆ ನೀವು ಆಲೋಚಿಸಿ ನೋಡಿದರೆ, ಜನರು ಸಂಕಟ ಪಡುವಂತೆ ಅವು ಸಂಕಟಪಡುವುದನ್ನು ಮತ್ತು ಜನರು ಸಂತೋಷಪಡುವಂತೆ ಅವರು ಸಂತೋಷಪಡುವುದನ್ನು ಕಾಣುವಿರಿ.”**

ಬುದ್ಧಿವಂತನಾಗಿರುವ, ಅಂತರ್ದೃಷ್ಟಿಯಿರುವ, ಒರಟನೋ ಕಠೋರನೋ ಅಲ್ಲದ, ಸದಾ ಗದರಿಸುವವನಲ್ಲದ, ಉತ್ತಮ ರೀತಿಯಲ್ಲಿ ಮನೆಯನ್ನು ನಿಭಾಯಿಸುವ ಸೌಭಾಗ್ಯವನ್ನು ಪಡೆದಿರುವ, ಪತ್ನಿ, ಮಕ್ಕಳು ಮತ್ತು ತನ್ನ ಪೋಷಣೆಯಲ್ಲಿರುವವರನ್ನು ಪರಿಶುದ್ಧಗೊಳಿಸಲಾದ ಶರೀಅತ್ತಿನ ನೆರಳಿನಲ್ಲಿ ಸರಿಯಾಗಿ ಸಂರಕ್ಷಣೆ ಮಾಡುವಂತಹ ಯಜಮಾನನ ನಿಯಂತ್ರಣದಲ್ಲಿರುವ ಮನೆಯು ಯಾವುದೋ ಅದು ಅತ್ಯಂತ ಸಂತೋಷಭರಿತವಾದ ಮನೆಯಾಗಿದೆ.

ಫೋನಿನ ಬಗ್ಗೆಯಿರುವ ಅವನ ನಿಯಂತ್ರಣವು ಹೀಗಿರುತ್ತದೆ:

ಮನೆಯಲ್ಲಿ ಪುರುಷರಿರುವಾಗ ಮಹಿಳೆಯು ಫೋನೆತ್ತುವುದಿಲ್ಲ. ಫೋನಿನ ವ್ಯರ್ಥ ಬಳಕೆಯಿಂದ ಮನೆಯವರು ಸಂಪೂರ್ಣ ವಿದೂರವಾಗಿರುತ್ತಾರೆ.

ಆತ ಮನೆಯಲ್ಲಿರುವವರಿಗೆ ಫೋನಿನ ಶಿಷ್ಟಾಚಾರಗಳನ್ನು ಕಲಿಸಿರುತ್ತಾನೆ. ಅವನ ಮಕ್ಕಳು ಆ ಶಿಷ್ಟಾಚಾರಗಳನ್ನು ಕಲಿಯುತ್ತಲೇ ಬೆಳೆಯುತ್ತಾರೆ. ಹೀಗೆ ಆ ಶಿಷ್ಟಾಚಾರಗಳು ಅವರಲ್ಲಿ ವಂಶೀಯವಾಗಿ ಹರಿಯುತ್ತವೆ.

ಫೋನ್ ಬಳಕೆಯ ಶಿಷ್ಟಾಚಾರ ಗೊತ್ತಿಲ್ಲದ ಮನೆಯು ಯಾವುದೋ ಅದು ಅತ್ಯಂತ ನತದೃಷ್ಟ ಮನೆಯಾಗಿದೆ. ಆ ಮನೆಯಲ್ಲಿ ಫೋನೆಂಬುದು ಒಂದು ಆಟಿಕೆಯಾಗಿದೆ. ಅದು ಗಂಡು ಮಕ್ಕಳ, ಹೆಣ್ಣು ಮಕ್ಕಳ, ದೊಡ್ಡವರ, ಚಿಕ್ಕವರ,

ಹೀಗೆ ಎಲ್ಲರ ಕೈಯಲ್ಲೂ ಇರುತ್ತದೆ. ಫೋನಿನ ಗಂಟೆ ಮೊಳಗಿದರೆ ಅದನ್ನೆತ್ತಲು ಎಲ್ಲರೂ ಧಾವಿಸುತ್ತಾರೆ.

ಮಹಿಳೆಯು ಫೋನಿನಲ್ಲಿ ಮಾತನಾಡತೊಡಗಿದರೆ ದೀರ್ಘ ಅವಧಿಯ ಬಳಿಕ ಮರಳಿ ಬಂದ ತಂದೆಯೊಂದಿಗೆ ಮಾತನಾಡುವಂತೆ ಅನ್ಯ ಪುರುಷರೊಂದಿಗೆ ಸುದೀರ್ಘವಾಗಿ ಮಾತನಾಡುತ್ತಾಳೆ. ಓ ಅಲ್ಲಾಹ್, ಆ ಮನೆಯಲ್ಲಿ ಸಂಭವಿಸುವ ದುರಂತಗಳಿಗೆ ಕೊನೆಯಿದೆಯೇ? ಓ ಅಲ್ಲಾಹ್, ಓ ಕರೀಮ್, ಓ ರಹ್ಮಾನ್, ಓ ರಹೀಮ್, ನಿನ್ನ ದಯೆಯನ್ನು ಮತ್ತು ನಿನ್ನ ಆಶ್ರಯವನ್ನು ಬೇಡುತ್ತಿದ್ದೇನೆ. ಉಪದೇಶ ನೀಡಿದರೆ ಉಪದೇಶ ಸ್ವೀಕರಿಸುವವನು ಮತ್ತು ಒಳಗಣ್ಣಿನಿಂದ ನೋಡುವಂತೆ ಮಾಡಿದಾಗ ಒಳಗಣ್ಣಿನಿಂದ ನೋಡುವವನು ಸೌಭಾಗ್ಯವಂತನಾಗಿದ್ದಾನೆ.

## 13. ಫೋನ್ ಮತ್ತು ಕಛೇರಿ

ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆಗಳಲ್ಲಿ ಸೆಕ್ರಟರಿಗಳಿಗಿರುವ ನಿರ್ದೇಶನಗಳನ್ನು ನಾನೊಮ್ಮೆ ನೋಡಿದೆ. ಆ ನಿರ್ದೇಶನಗಳು ಬಹಳ ದೀರ್ಘವಾಗಿದ್ದವು, ಅತ್ಯಧಿಕ ತಪ್ಪುಗಳನ್ನು ಹೊಂದಿದ್ದವು. ನಮ್ಮ ಅರಬ್ ಮುಸ್ಲಿಮರಿಗೆ ಅವು ಹೊಂದಿಕೆಯಾಗಲಾರವು. ನಮ್ಮ ಅಧಿಕಾರಿಗಳು ವಿನಮ್ರತೆಯಲ್ಲಿ ಜಾಗತಿಕ ಅಧಿಕಾರಿಗಳನ್ನು ಮಾದರಿಯನ್ನಾಗಿ ಮಾಡಿಕೊಳ್ಳಲು ಅವು ನಿರ್ಬಂಧಿಸುತ್ತವೆ, ಅಡ್ಡಪರದೆಯನ್ನು ತೊರೆಯಬೇಕಾಗುತ್ತದೆ ಮತ್ತು ಅಧಿಕಾರಿಗೆ ನೇರವಾಗಿ ಫೋನ್ ಸಂಪರ್ಕವಿರುತ್ತದೆ. ಇದು ಸಾರ್ವತ್ರಿಕವಾಗಿ ಕಾಣುವಂತದ್ದಾಗಿದೆ. ಇನ್ನು ಕೆಲವು ವಿಶೇಷ ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಅವರ ಫೋನ್ ಸಂಪರ್ಕವು ಒಬ್ಬ ಮಧ್ಯವರ್ತಿಯ ಕೈಯಲ್ಲಿರುತ್ತದೆ. ಆತ ಪ್ರಾಮುಖ್ಯತೆಯಿರುವ ಕರೆಗಳನ್ನು ಮಾತ್ರ ಅಧಿಕಾರಿಗೆ ವರ್ಗಾಯಿಸುತ್ತಾನೆ. ಉಳಿದ ಕರೆಗಳನ್ನು ಆತನೇ ನಿಭಾಯಿಸುತ್ತಾನೆ.

**ಇಲ್ಲಿ ಪ್ರಮುಖವಾದ ವಿಷಯವೇನೆಂದರೆ** ಹಿತವನ್ನು ಕಾಪಾಡುವುದಾಗಿದೆ. ಜನರಿಗೆ ತನ್ನೊಂದಿಗೆ ಸಂಪರ್ಕವುಂಟಾಗದಂತೆ ಮಾಡುವುದನ್ನು ಅಧಿಕಾರಿಯು ಎಷ್ಟರ ಮಟ್ಟಿಗೆ ತೊರೆಯುತ್ತಾನೋ ಅಷ್ಟರಮಟ್ಟಿಗೆ ಅದು ಒಳ್ಳೆಯದಾಗಿದೆ. ಆತನ ಸಂತೋಷ ಮತ್ತು ಯಶಸ್ಸು ಅದರಲ್ಲೇ ಇದೆ. ಅಲ್ಲಾಹು ಅವನ ಕೆಲಸವನ್ನು ಸರಿಯಾದ ವಿಧದಲ್ಲಿ ಮಾರ್ಗದರ್ಶಿಸಲು ಇದು ಪ್ರೇರಕವಾಗುತ್ತದೆ.

## 14. ಫೋನ್ ಮತ್ತು ಫತ್ವಾ ಕೇಳುವುದು

ಫೋನ್‌ನ ಮೂಲಕ ಫತ್ವಾ ಕೇಳುವ ಅತ್ಯುತ್ತಮ ವಿಧಾನವು ಹೀಗಿದೆ:

**"ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು. ಅಲ್ಲಾಹು ತಮ್ಮನ್ನು ಚೆನ್ನಾಗಿಟ್ಟಿರಲಿ. ಓ ಶೈಖ್, ನನ್ನಲ್ಲೊಂದು ಪ್ರಶ್ನೆಯಿದೆ. ಅದೇನೆಂದರೆ..."** ಹೀಗೆ ತನ್ನ ಪ್ರಶ್ನೆಯನ್ನು ಹೇಳಿ ಅದಕ್ಕಿರುವ ಉತ್ತರವನ್ನು ಆಲಿಸಿ ಕೊನೆಗೆ: **"ಅಲ್ಲಾಹು ತಮಗೆ ಅತ್ಯುತ್ತಮವಾದ ಪ್ರತಿಫಲವನ್ನು ನೀಡಲಿ, ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು."**

ಇದು ಫತ್ವಾ ಕೇಳುವ ಅತ್ಯಂತ ಶಿಷ್ಟಾಚಾರದಿಂದ ಕೂಡಿದ, ಸಂಕ್ಷಿಪ್ತವಾದ ವಿಧಾನವಾಗಿದೆ. ಅನಗತ್ಯವಾದ ಅಭಿವಂದನೆಗಳನ್ನು ಹೇಳುತ್ತಾ ಸಂಭಾಷಣೆ ಯನ್ನು ದೀರ್ಘಗೊಳಿಸುವುದು ಇದರಲ್ಲಿಲ್ಲ. ಇದರಿಂದ ಇತರ ಜನರಿಗೆ ಕೂಡ ಆ ವಿದ್ವಾಂಸರೊಂದಿಗೆ ಫತ್ವಾ ಕೇಳಲು ಸಮಯ ಸಿಗುತ್ತದೆ.

* **ಆದರೆ ಇಲ್ಲಿ ಎಚ್ಚರಿಕೆ ವಹಿಸಬೇಕಾದ ಕೆಲವು ವಿಷಯಗಳಿವೆ. ಹಾಗೆಯೇ ಕಿರುಕುಳ ನೀಡುವಂತಹ ಕೆಲವು ವಿಷಯಗಳೂ ಇವೆ.**

ಉದಾಹರಣೆಗೆ, ಮುಫ್ತಿಯ ಅರಿವನ್ನು ಪರೀಕ್ಷಿಸಲು ನಿರ್ಮಿಸಲಾದ ಕೆಲವು ಪ್ರಶ್ನೆಗಳು. ಫತ್ವಾ ಕೇಳುವ ವ್ಯಕ್ತಿ ಒಂದು ವಿಷಯದ ಬಗ್ಗೆ ಅಧ್ಯಯನ ಮಾಡಿ ಅದಕ್ಕಿರುವ ಉತ್ತರಗಳನ್ನು ಸಂಗ್ರಹಿಸಿ ಮುಫ್ತಿಯೊಂದಿಗೆ ಆ ಬಗ್ಗೆ ಪ್ರಶ್ನಿಸುತ್ತಾನೆ.

ಮುಫ್ತಿಗೆ ಉತ್ತರ ಗೊತ್ತಿಲ್ಲವೆಂಬುದನ್ನು ಬಹಿರಂಗಪಡಿಸುವುದಕ್ಕಾಗಿ ಆತ ಮೊಂಡುತನದಿಂದ ತರ್ಕಿಸುತ್ತಾನೆ. ಉಲಮಾಗಳ ಬಗ್ಗೆ ಮನಸ್ಸಿನಲ್ಲಿ ದ್ವೇಷವಿರುವವರ ಮತ್ತು ಅವರನ್ನು ಟೀಕಿಸುವವರ ಹೊರತು ಯಾರೂ ಇದನ್ನು ಮಾಡಲಾರರು.

ಅದೇ ರೀತಿ ಒಬ್ಬ ಮುಫ್ತಿ ಯಾವ ಗುಂಪಿಗೆ ಸೇರಿದವನೆಂದು ಪರೀಕ್ಷಿಸು ವುದಕ್ಕಾಗಿ ಅವರು ಕೆಲವು ಪ್ರಶ್ನೆಗಳನ್ನು ನಿರ್ಮಿಸುತ್ತಾರೆ. ನಂತರ ಸಾತ್ವಿಕ ಮುಸ್ಲಿಮ್ ಯುವಕರನ್ನು ವಂಚಿಸುವುದಕ್ಕಾಗಿ ಅವರನ್ನು ಕರೆದು ಈ ಪ್ರಶ್ನೆಗಳನ್ನು ಆ ಮುಫ್ತಿಯೊಂದಿಗೆ ಕೇಳುವಂತೆ ಬಲವಂತಪಡಿಸುತ್ತಾರೆ. ಇದು ಆ ಆಲಿಮ್ ಬಿದ್‌ಅತ್‌ನಲ್ಲಿದ್ದಾನೆಂದು ತಂತ್ರಪೂರ್ವಕವಾಗಿ ಸ್ಥಾಪಿಸುವು ದಕ್ಕಾಗಿದೆ. ಮತ್ತು ಮುಸ್ಲಿಮ್ ಯುವಕರನ್ನು ಉಲಮಾಗಳಿಂದ ದೂರೀಕರಿಸು ವುದಕ್ಕಾಗಿದೆ.

ಮುಫ್ತಿ ಗೊಂದಲದಲ್ಲಿದ್ದಾನೆಂದು ಸ್ಥಾಪಿಸುವುದಕ್ಕಾಗಿ ಕೆಲವರು ಹೀಗೆ ಮಾಡುತ್ತಾರೆ.

ಫತ್ವಾ ಕೇಳುವ ಕೆಲವು ಜನರು ಮಾಡುವ ಉಪದ್ರವಕಾರಿ ಕರೆಗಳೇನೆಂದರೆ, ರಿಯಾಯಿತಿಯನ್ನು ಹುಡುಕುತ್ತಾ ಒಂದಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಲೇ ಹೋಗುವುದು.

ಹಾಗೆಯೇ ಫೋನ್ ಮಾಡುವುದು ಸೂಕ್ತವಲ್ಲದ ಸಮಯಗಳಲ್ಲಿ ಫೋನ್ ಮಾಡಿ ಸುದೀರ್ಘವಾಗಿ ಮಾತನಾಡುವುದು.

ಫತ್ವಾ ಕೇಳುವುದಕ್ಕಾಗಿಯೇ ಇರುವಂತಹ ಸಂಖ್ಯೆಗೆ ಕರೆ ಮಾಡದೆ ಮುಫ್ತಿಯ ಬೇರೆ ಸಂಖ್ಯೆಗೆ ಕರೆ ಮಾಡುವುದು.

ಮುಫ್ತಿಯ ಅರಿವೋ, ಅನುಮತಿಯೋ ಇಲ್ಲದೆ ಫೋನ್ ಸಂಭಾಷಣೆಯನ್ನು ಧ್ವನಿಮುದ್ರಣಗೊಳಿಸಿ ಅದನ್ನು ಪ್ರಚಾರ ಮಾಡುವುದು. ಇದು ವಂಚನೆಯಾಗಿದೆ. ಇದರ ಬಗ್ಗೆ ಮುಂದೆ ಬರಲಿದೆ.

# 15. ಚೈತನ್ಯದಾಯಿ ಫೋನ್

ಕಡಿದು ಹೋದ ಕುಟುಂಬ ಸಂಬಂಧವನ್ನು ಜೋಡಿಸುವುದಕ್ಕಾಗಿ, ಮುಸ್ಲಿಮರ ನಡುವೆ ಶರೀಅತ್ತಿನ ಬುನಾದಿಯಲ್ಲಿ ಸಹೋದರ ಸಂಬಂಧವನ್ನು ಸ್ಥಾಪಿಸುವುದಕ್ಕಾಗಿ, ಒಳಿತಿನ ಸುವಾರ್ತೆ ನೀಡುವುದಕ್ಕಾಗಿ ಮತ್ತು ಮುಸ್ಲಿಮ್ ಸಹೋದರರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಫೋನನ್ನು ಬಳಸುವುದು.

ಅದೇ ರೀತಿ ರೋಗಿಗೆ ಸಲಾಮ್ ಹೇಳುವುದಕ್ಕಾಗಿ, ಆತನಿಗೋಸ್ಕರ ಪ್ರಾರ್ಥಿಸು ವುದಕ್ಕಾಗಿ ಮತ್ತು ಆತನಿಗೆ ದಣಿವಾಗದ ವಿಧದಲ್ಲಿ ಆತನ ಯೋಗಕ್ಷೇಮ ವಿಚಾರಿಸುವುದಕ್ಕಾಗಿ ಫೋನ್ ಮಾಡುವುದು. ರೋಗಿಯೊಂದಿಗೆ ಅವನ ರೋಗದ ಬಗ್ಗೆ ವಿವರಣಾತ್ಮಕವಾಗಿ ವಿಚಾರಿಸುವುದರ ಬಗ್ಗೆ ಎಚ್ಚರ ವಹಿಸಿರಿ.

ಹತ್ತಿರದ ಸಂಬಂಧಿಕನನ್ನು ಅಥವಾ ಸಂಪತ್ತನ್ನು ಕಳೆದುಕೊಂಡವನನ್ನು ಸಾಂತ್ವನ ಪಡಿಸುವುದಕ್ಕಾಗಿ ಫೋನ್ ಮಾಡುವುದು. ಅದೆಷ್ಟೋ ಸಾಂತ್ವನಗಳು ಕಷ್ಟಕ್ಕೊಳಗಾದವನಿಗೆ ನೆಮ್ಮದಿಯನ್ನು ನೀಡಿದ ಉದಾಹರಣೆಗಳಿವೆ.

ಆದರೆ ಈ ಎಲ್ಲ ಸ್ಥಳಗಳಿಗೆ ಸ್ವತಃ ನಡೆದು ಹೋಗುವ ಸುನ್ನತ್ತ್ ಫೋನ್‌ನಿಂದಾಗಿ ಕಳೆದುಹೋಗದಿರಲಿ. ನಿಮಗೆ ಸ್ವತಃ ಹೋಗಿ ಬರಲು ಸಾಧ್ಯವಿರುವ ಸ್ಥಳಗಳಿಗೆ ಹೋಗಿ ಬರುವುದೇ ಉತ್ತಮವಾಗಿದೆ.

ರೋಗಿ, ಕಷ್ಟದಲ್ಲಿರುವವನು ಮೊದಲಾದವರನ್ನು ಸಂದರ್ಶಿಸಬೇಕಾದ ಸಮಯವು ಖತೀಬ್ ಎರಡು ಖುತ್ಬಾಗಳ ಮಧ್ಯೆ ಕುಳಿತುಕೊಳ್ಳುವಷ್ಟು ಸಮಯವಾಗಿರುವುದರಿಂದ, ಫೋನ್‌ನ ಮೂಲಕ ಇಷ್ಟು ಹೊತ್ತು ಮಾತ್ರ ಮಾತನಾಡಿರಿ. ಇದು ಮೂಲ ನಿಯಮವಾಗಿದೆ. ಆದರೆ ನಿಮ್ಮ ಉಪಸ್ಥಿತಿಯು ರೋಗಿಗೆ ಹೆಚ್ಚು ನೆಮ್ಮದಿ ನೀಡುತ್ತದೆಯೆಂದಾದರೆ ಅದು ಬೇರೆ ವಿಷಯ.

# 16. ಕಿರುಕುಳ ನೀಡುವ ಫೋನ್

ಮುಸ್ಲಿಮನಿಗೆ ಹಿಂಸೆ ಕೊಡುವುದು ನಿಷಿದ್ಧವಾಗಿದೆ. ಮುಸ್ಲಿಮನನ್ನು ವಂಚಿಸುವುದು ನಿಷಿದ್ಧವಾಗಿದೆ. ಮುಸ್ಲಿಮನ ಘನತೆಯನ್ನು ತೇಜೋವಧೆ ಮಾಡುವುದು ನಿಷಿದ್ಧವಾಗಿದೆ.

ಫೋನ್ ಸಂಭಾಷಣೆಯ ಮೂಲಕ ಉಂಟಾಗುವಂತಹ ಕೆಲವು ಕಿರುಕುಳಗಳು ಹೀಗಿವೆ:

## ಎ. ದುಪ್ಪಟ್ಟು ವಂಚನೆ:

ವಿಶ್ವಾಸಾರ್ಹತೆಯನ್ನು ಸಂರಕ್ಷಿಸುವ ಮತ್ತು ವಂಚನೆಯನ್ನು ದ್ವೇಷಿಸುವ ಒಬ್ಬ ಮುಸ್ಲಿಮನಿಗೆ ಫೋನ್‌ನಲ್ಲಿ ಮಾತನಾಡುವವನ ಅನುಮತಿಯೋ ಅರಿವೋ ಇಲ್ಲದೆ ಆ ಸಂಭಾಷಣೆಯನ್ನು ಧ್ವನಿಮುದ್ರಣಗೊಳಿಸುವುದು ಸಮ್ಮತಾರ್ಹವಲ್ಲ. ಆ ಸಂಭಾಷಣೆಯು ಧಾರ್ಮಿಕವಾಗಿದ್ದರೂ, ಐಹಿಕವಾಗಿದ್ದರೂ ಸರಿ. ಅದು ಫತ್ವಾ ಕೇಳುವುದೋ, ಇಲ್ಮೀ ಸಂಶೋಧನೆಯೋ, ಹಣಕ್ಕೆ ಸಂಬಂಧಿಸಿದ ವಿಷಯವೋ, ಇತರ ಯಾವುದೇ ವಿಷಯವಾಗಿದ್ದರೂ ಸರಿ.

ಜಾಬಿರ್ ಇಬ್ನ್ ಅಬ್ದಿಲ್ಲಾಹ್ ಅಲ್‌ಅನ್ಸಾರೀ(ﷺ)ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« إِذَا حَدَّثَ الرَّجُلُ فَالْتَفَتَ فَهِيَ أَمَانَةٌ »

**“ಒಬ್ಬ ವ್ಯಕ್ತಿ ಮಾತನಾಡುವಾಗ ಅತ್ತಿತ್ತ ನೋಡಿದರೆ ಅವನ ಆ ಮಾತು ವಿಶ್ವಾಸಾರ್ಹತೆ ಆಗಿದೆ.” [ಅಹ್ಮದ್, ಅಬೂ ದಾವೂದ್, ಅತ್ತಿರ್ಮಿದಿ]**

ಅತ್ತಿತ್ತ ನೋಡುವುದು ಎಂದರೆ ತನ್ನ ಮಾತನ್ನು ಯಾರಾದರೂ ಆಲಿಸುತ್ತಿರುವರೋ ಎಂದು ಎಚ್ಚರಿಕೆಯಿಂದ ನೋಡುವುದಾಗಿದೆ. [ಫೈದುಲ್ ಕದೀರ್ 1/339]. ಈ ರೀತಿ ಅತ್ತಿತ್ತ ನೋಡುತ್ತಾ ನಿಮ್ಮ ಸಂಗಡಿಗನು ನಿಮ್ಮೊಂದಿಗೆ ಹೇಳುವ ಮಾತು ಅಮಾನತ್ (ವಿಶ್ವಾಸಾರ್ಹತೆ) ಆಗಿದೆ. ಅದನ್ನು ನೀವು ಬೇರೆ ಯಾರಿಗಾದರೂ ತಿಳಿಸಿದರೆ ನೀವು ಅಲ್ಲಾಹನ ಆಜ್ಞೆಗೆ ವಿರುದ್ಧ ವಾಗಿ ಸಾಗಿದವರಾಗುವಿರಿ. ಯಾಕೆಂದರೆ ವಿಶ್ವಾಸಾರ್ಹತೆಯನ್ನು ಯೋಗ್ಯವಲ್ಲದ ಸ್ಥಳಕ್ಕೆ ವರ್ಗಾಯಿಸಬಾರದು. ಹೀಗೆ ಮಾಡಿದರೆ ನೀವು ಅನ್ಯಾಯವೆಸಗಿ ದವರಾಗುವಿರಿ. ಆದ್ದರಿಂದ ಅದನ್ನು ಬಚ್ಚಿಡುವುದು ಕಡ್ಡಾಯವಾಗಿದೆ. ಯಾಕೆಂದರೆ ಆತ ಅತ್ತಿತ್ತ ನೋಡುವುದು ತಾನು ಹೇಳುವ ಮಾತನ್ನು ರಹಸ್ಯವಾಗಿಡಬೇಕೆಂದು ಹೇಳುವುದಕ್ಕೆ ಸಮವಾಗಿದೆ. ವಿದ್ವಾಂಸರು ಹೇಳುತ್ತಾರೆ: ಇದೊಂದು ಸಮಗ್ರ ಶೈಲಿಯಾಗಿದೆ. ಅತ್ತಿತ್ತ ನೋಡುವುದು ಎಂಬ ಈ ವಾಕ್ಯವು ಹತ್ತು ವಿಧದ ಶಿಷ್ಟಾಚಾರಗಳನ್ನು ಒಳಗೊಂಡಿದೆ. ಉತ್ತಮ ಸಹವರ್ತಿತ್ವ, ರಹಸ್ಯವನ್ನು ಬಚ್ಚಿಡುವುದು, ಪ್ರೀತಿಯನ್ನು ಸಂರಕ್ಷಿಸುವುದು, ದ್ವೇಷಕ್ಕೆ ಕಾರಣ ವಾಗುವ ಚಾಡಿಮಾತುಗಳನ್ನು ವರ್ಜಿಸುವುದು ಮೊದಲಾದ ಶಿಷ್ಟಾಚಾರಗಳು ಇದರಲ್ಲಿವೆ.

ಅಲ್‌ಗಝ್ಝಾಲಿಯ 'ಇಹ್ಯಾಅ್'ನಲ್ಲಿ ಹೀಗೆ ಹೇಳಲಾಗಿದೆ: "ರಹಸ್ಯವನ್ನು ಪ್ರಚಾರ ಮಾಡುವುದು ವಂಚನೆಯಾಗಿದೆ. ಅದನ್ನು ಪ್ರಚಾರ ಮಾಡುವುದರಿಂದ ಹಾನಿಯುಂಟಾಗುತ್ತದೆಯೆಂದಾದರೆ ಅದು ನಿಷಿದ್ಧವಾಗಿದೆ."

ಮಾವರ್ದೀ ಹೇಳುತ್ತಾರೆ: "ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ರಹಸ್ಯವನ್ನು ಬಹಿರಂಗಪಡಿಸುವುದು ಸ್ವತಃ ತನ್ನ ರಹಸ್ಯವನ್ನು ಬಹಿರಂಗಪಡಿಸು ವುದಕ್ಕಿಂತಲೂ ಕೆಟ್ಟದಾಗಿದೆ. ಯಾಕೆಂದರೆ ಅದು ಎರಡು ಅಪಾಯಗಳಿಗೆ ಕಾರಣವಾಗುತ್ತದೆ. ಒಂದು: ಆ ವ್ಯಕ್ತಿ ವಿಶ್ವಾಸಾರ್ಹತೆಯಿಂದ ಹೇಳಿದ್ದರೆ ಅದನ್ನು ಬಹಿರಂಗಪಡಿಸುವುದು ವಂಚನೆಯಾಗಿದೆ. ಆ ವ್ಯಕ್ತಿ ಮಾಹಿತಿ ಪಡೆಯುವ ದೃಷ್ಟಿಯಿಂದ ಹೇಳಿದ್ದರೆ ಅದನ್ನು ಬಹಿರಂಗಪಡಿಸುವುದು ಚಾಡಿಯಾಗಿದೆ.

ಇವೆರಡೂ ಒಟ್ಟುಗೂಡಿದರೂ ಇಲ್ಲದಿದ್ದರೂ ಇವೆರಡು ಕೃತ್ಯಗಳು ನಿಂದನೀಯವಾಗಿವೆ.”

ಅರ್ರಾಗಿಬ್ ಹೇಳುತ್ತಾರೆ: “ರಹಸ್ಯವು ಎರಡು ವಿಧದಲ್ಲಿದೆ. ಒಂದು: ರಹಸ್ಯವಾಗಿಡಬೇಕೆಂದು ಹೇಳುತ್ತಾ ಒಬ್ಬ ವ್ಯಕ್ತಿ ಒಂದು ಮಾತನ್ನು ಹೇಳುವುದು. ರಹಸ್ಯವಾಗಿಡಬೇಕೆಂದು ಹೇಳುವುದು ಒಂದೋ ಮಾತಿನ ಮೂಲಕವಾಗಿ ರಬಹುದು. ಅಂದರೆ ಆ ವ್ಯಕ್ತಿ ನಿನ್ನೊಂದಿಗೆ “ನಾನು ಹೇಳುವುದನ್ನು ರಹಸ್ಯವಾಗಿಡು” ಎಂದು ಹೇಳುವುದು. ಅಥವಾ ಅದು ಸಂದರ್ಭಕ್ಕೆ ತಕ್ಕಂತಿರಬಹುದು. ಅಂದರೆ ಆ ವ್ಯಕ್ತಿ ನೀನು ಒಂಟಿಯಾಗಿರುವುದನ್ನು ಕಾದು ನಿನ್ನೊಂದಿಗೆ ಒಂದು ಮಾತನ್ನು ಹೇಳುವುದು. ಅಥವಾ ಮೆತ್ತಗೆ ಕಿವಿಯಲ್ಲಿ ಹೇಳುವುದು. ಈ ಹದೀಸಿನಲ್ಲಿ ಉದ್ದೇಶಿಸಿರುವುದು ಇದನ್ನಾಗಿದೆ.”

ಅವನ ಅನುಮತಿಯೋ ಅರಿವೋ ಇಲ್ಲದೆ ನೀನು ಆ ಸಂಭಾಷಣೆಯನ್ನು ಧ್ವನಿಮುದ್ರಣಗೊಳಿಸಿದರೆ ಅದು ಖಂಡಿತವಾಗಿಯೂ ಕುತಂತ್ರ ಮತ್ತು ವಂಚನೆಯಾಗಿದೆ, ವಿಶ್ವಾಸದ್ರೋಹವೂ ಆಗಿದೆ.

ಇನ್ನು ನೀನು ಆ ಸಂಭಾಷಣೆಯನ್ನು ಪ್ರಚಾರ ಮಾಡಿದರೆ ಅದು ವಂಚನೆಯಲ್ಲಿ ಮಿತಿಮೀರುವುದಾಗಿದೆ. ವಿಶ್ವಾಸಘಾತವೂ ಆಗಿದೆ.

ಇನ್ನು ನೀನು ಮೂರನೆ ಕೃತ್ಯವನ್ನು ಮಾಡುವುದಾದರೆ, ಅಂದರೆ ಆ ಸಂಭಾಷಣೆಯನ್ನು ಕತ್ತರಿಸುವುದು, ಸಂಭಾಷಣೆಯ ಕೆಲವು ಶಬ್ದಗಳನ್ನು ಮುಂದೆ ಮಾಡುವುದು ಮತ್ತು ಕೆಲವು ಶಬ್ದಗಳನ್ನು ಹಿಂದೆ ಮಾಡುವುದು ಇತ್ಯಾದಿಗಳನ್ನು ಮಾಡಿ ಆ ಸಂಭಾಷಣೆಯನ್ನು ಅಸಾಂದರ್ಭಿಕ ಗೊಳಿಸುವುದಾದರೆ ಅದು ಹಲವು ಪಟ್ಟು ದೋಷವಿರುವ ವಂಚನೆಯಾಗಿದೆ.

**ಒಟ್ಟಿನಲ್ಲಿ:** ಫೋನ್ ಸಂಭಾಷಣೆಯನ್ನು ಅಥವಾ ಇತರ ಸಂಭಾಷಣೆಗಳನ್ನು ಮಾತನಾಡುವವನ ಅರಿವೋ ಒಪ್ಪಿಗೆಯೋ ಇಲ್ಲದೆ ಧ್ವನಿಮುದ್ರಣಗೊಳಿಸುವುದು ದುಷ್ಕೃತ್ಯ ಮತ್ತು ವಂಚನೆಯಾಗಿದೆ. ಅದು ನ್ಯಾಯಕ್ಕೆ ವಿರುದ್ಧವಾಗಿದೆ. ಧರ್ಮದಲ್ಲಿ, ಸ್ವಭಾವದಲ್ಲಿ ಮತ್ತು ಶಿಷ್ಟಾಚಾರದಲ್ಲಿ ಅಪೂರ್ಣರಾಗಿರುವವರೇ

ಹೊರತು ಯಾರೂ ಇದನ್ನು ಮಾಡಲಾರರು. ಆದ್ದರಿಂದ ಓ ಅಲ್ಲಾಹನ ದಾಸರೇ, ಅಲ್ಲಾಹನನ್ನು ಭಯಪಡಿರಿ. ನಿಮ್ಮ ವಿಶ್ವಾಸಾರ್ಹತೆಯಲ್ಲಿ ವಂಚನೆ ಮಾಡಬೇಡಿರಿ. ನಿಮ್ಮ ಸಹೋದರರಿಗೆ ಮೋಸ ಮಾಡಬೇಡಿರಿ.

### ಬಿ. ಕದ್ದಾಲಿಕೆಯ ಉಪಕರಣ:

ಆಧುನಿಕ ತಂತ್ರಜ್ಞಾನ ಮತ್ತು ಅದರ ಆವಿಷ್ಕಾರಗಳು ಎಲ್ಲಿಗೆ ತಲುಪಿದೆಯೆಂದರೆ ಇಂದು ಒಬ್ಬ ವ್ಯಕ್ತಿಯನ್ನು ತೇಜೋವಧೆ ಮಾಡುವುದು ಅತಿಸುಲಭವಾಗಿ ಪರಿಣಮಿಸಿದೆ.

ಕೆಲವರು ಫೋನ್ ಕದ್ದಾಲಿಸುವ ಉಪಕರಣಗಳನ್ನು ಬಳಸಿ ರಾತ್ರಿ ಹಗಲು ಇತರರ ಫೋನ್ ಸಂಭಾಷಣೆಗಳನ್ನು ಕದ್ದಾಲಿಸುತ್ತಿರುತ್ತಾರೆ. ಅವರಿಗೆ ಅರಿವಿಲ್ಲದೆ ಅವರ ಸಂಭಾಷಣೆಗಳನ್ನು ಧ್ವನಿ ಮುದ್ರಣ ಮಾಡುತ್ತಾರೆ. ಇದು ನಿಷಿದ್ಧವಾಗಿದೆ. ಇದು ಸಮ್ಮತಾರ್ಹವಲ್ಲ. ಸಂಭಾಷಣೆ ಮಾಡುವವರಿಗೆ ಇದರ ಅರಿವಿದ್ದರೂ ಅಥವಾ ಅವರಲ್ಲೊಬ್ಬನಿಗೆ ಇದರ ಅರಿವಿದ್ದರೂ ಸಹ ಹೀಗೆ ಕದ್ದಾಲಿಕೆ ಮಾಡುವುದು ನಿಷಿದ್ಧವಾಗಿದೆ.

ಇಬ್ನ್ ಅಬ್ಬಾಸ್(ﷺ)ರವರು ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« مَنِ اسْتَمَعَ إِلَى حَدِيثِ قَوْمٍ وَهُمْ لَهُ كَارِهُونَ صُبَّ فِي أُذُنَيْهِ الْآنِكُ يَوْمَ الْقِيَامَةِ »

**"ಒಂದು ಜನತೆಗೆ ಇಷ್ಟವಿಲ್ಲದೆ ಅವರ ಸಂಭಾಷಣೆಯನ್ನು ಯಾರಾದರೂ ಆಲಿಸುವುದಾದರೆ ಅಂತ್ಯದಿನದಂದು ಅವನ ಎರಡು ಕಿವಿಗಳಿಗೆ ಸೀಸವನ್ನು ಸುರಿಯಲಾಗುವುದು." [ಅಲ್‌ಬುಖಾರಿ]**

## ಸಿ. ಫೋನ್ ಮೂಲಕ ಚುಡಾಯಿಸುವುದು:

ನಾನು ಇದನ್ನು ಕಾಲಘಟ್ಟಗಳನ್ನು ದಾಟಿಕೊಂಡು ಬಂದ ಒಂದು ರೋಗವೆಂದು ಭಾವಿಸುತ್ತೇನೆ. ಮಹಿಳೆಯರಿರುವ ಮುಸ್ಲಿಮರ ಮನೆಗೆ ಫೋನ್ ಮಾಡಿ ಅವರನ್ನು ಚುಡಾಯಿಸುವ ಕೆಲಸವನ್ನು ಮಾಡುವ ಇಂತಹ ಅವಿವೇಕಿಗಳ ಬಗ್ಗೆ ದೂರುಗಳು ಹೆಚ್ಚು ಹೆಚ್ಚಾಗಿ ವರದಿಯಾಗುತ್ತಿವೆ.

ಕೆಲವರು ಮನೆಯಲ್ಲಿ ಯಜಮಾನನು ಇಲ್ಲದ ಸಮಯ ನೋಡಿ ಆ ಮನೆಯಲ್ಲಿರುವ ಫೋನ್‌ಗೆ ಕರೆ ಮಾಡುತ್ತಾನೆ. ಮಹಿಳೆಯರು ಫೋನೆತ್ತಿದರೆ ಅಶ್ಲೀಲವಾಗಿ ಮಾತನಾಡುತ್ತಾನೆ. ಕೆಲವರು ಅನ್ಯ ಮಹಿಳೆಯರಿಗೆ ಫೋನ್ ಮಾಡಿ ಅವರೊಂದಿಗೆ ಮಾತನಾಡುತ್ತಾರೆ. ಇದು ಅನ್ಯಮಹಿಳೆಯೊಂದಿಗೆ ಒಂಟಿಯಾಗುವುದರಲ್ಲಿರುವ ಒಂದು ವಿಧವಾಗಿದೆ. ಅಥವಾ ಅದರೆಡೆಗೆ ಒಯ್ಯುವ ದಾರಿಯಾಗಿದೆ. ಪ್ರವಾದಿ(ﷺ)ರವರು ಹೇಳಿದರು:

« إِيَّاكُمْ وَالدُّخُولَ عَلَى النِّسَاءِ »

**"ಮಹಿಳೆಯರ ಬಳಿಗೆ ಪ್ರವೇಶಿಸುವುದರ ಬಗ್ಗೆ ಎಚ್ಚರವಹಿಸಿರಿ." [ಅಲ್‌ಬುಖಾರಿ ಮತ್ತು ಮುಸ್ಲಿಮ್] ಅಂದರೆ ಅನ್ಯ ಮಹಿಳೆಯರು.**

ಅಲ್ಲಾಹನ ಮೇಲಾಣೆ, ಇದು ನಿಷಿದ್ಧವಾಗಿದೆ, ನಿಷಿದ್ಧವಾಗಿದೆ, ನಿಷಿದ್ಧವಾಗಿದೆ. ಮಾತ್ರವಲ್ಲ ಇದು ಪಾಪವೂ ದೋಷವೂ ಆಗಿದೆ. ಇದನ್ನು ಮಾಡುವವನು ಶಿಕ್ಷಾರ್ಹನಾಗಿದ್ದಾನೆ. ಬಹುಶಃ ಅವನನ್ನು ಬಹಿರಂಗವಾಗಿ ಅಪಮಾನಗೊಳಿಸು ವಂತಹ ಶಿಕ್ಷೆಯು ಅವನ ಮೇಲೆರಗಲೂಬಹುದು.

ಇಮಾಮ್ ಅಶ್ಶಾಫಿಈ(ﷺ) ಹೇಳುತ್ತಾರೆ:

إِنَّ الزِّنَا دَيْنٌ فَإِنْ أَقْرَضْتَهُ

كَانَ الْوَفَاءُ مِنْ أَهْلِ بَيْتِكَ فَاعْلَمِ

**“ಝಿನಾ (ವ್ಯಭಿಚಾರ) ಎಂಬುದು ಒಂದು ಸಾಲವಾಗಿದೆ. ನೀನು ಆ ಸಾಲವನ್ನು ನೀಡಿದರೆ ಕೆಲವೊಮ್ಮೆ ಸಂದಾಯ ಮಾಡುವವರು ನಿಮ್ಮ ಮನೆಯವರಾಗಿರುವರು ಎಂಬುದನ್ನು ಅರಿತುಕೋ.”**

ಬಹಿರಂಗ ಅಪಮಾನದ ಬಗ್ಗೆ ಮತ್ತು ನರಕವಾಸಿಗಳಿಗಿರುವ ನಿಂದನೀಯ ಸ್ಥಿತಿಯ ಬಗ್ಗೆ ನಾವು ಅಲ್ಲಾಹನೊಂದಿಗೆ ರಕ್ಷೆಯನ್ನು ಬೇಡುತ್ತೇವೆ.

ಆದ್ದರಿಂದ ಮನೆಯ ಯಜಮಾನನು ತನ್ನ ಮನೆಯಲ್ಲಿರುವ ಮಹಿಳೆಯರ ಸಂರಕ್ಷಣೆ ಮಾಡಲು, ದುರುಳರ ಕೈಯಿಂದ ಅವರನ್ನು ಪಾರು ಮಾಡಲು ಕೆಲವು ಮಾರ್ಗಗಳನ್ನು ಅನುಸರಿಸಬೇಕಾಗಿದೆ. ಅವು:

ಮನೆಯಲ್ಲಿರುವ ಫೋನ್ ಎಲ್ಲರ ಕೈಗೂ ಸಿಗುವಂತಿರದೆ ಒಂದು ನಿಶ್ಚಿತ ಸ್ಥಳದಲ್ಲಿರಬೇಕು. ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಫೋನ್‌ಗಳಿರಬಾರದು. ವಿಶೇಷವಾಗಿ ಹೆಣ್ಣು ಮಕ್ಕಳ ಕೋಣೆಯಲ್ಲಿ ಫೋನ್ ಇರಬಾರದು. ಫೋನ್ ಕರೆ ಬರುವಾಗ ಅದಕ್ಕೆ ಉತ್ತರ ನೀಡುವವರಿಗೆ ಮನೆಯ ಯಜಮಾನನು ಶಿಷ್ಟಾಚಾರಗಳನ್ನು ಕಲಿಸಿಕೊಡಬೇಕು. ಫೋನ್ ಮಾಡಿದವರೊಂದಿಗೆ ಸುದೀರ್ಘವಾಗಿ ಮಾತನಾಡುವುದನ್ನು ವಿರೋಧಿಸಬೇಕು.

## ಡಿ. ಫೋನಿನ ಹುಚ್ಚು:

ಫೋನನ್ನು ಅತಿಯಾಗಿ ಬಳಸುವುದರ ಬಗ್ಗೆ ಎಚ್ಚರ ವಹಿಸಿರಿ. ಇದರಿಂದ ನಿಮಗೆ ಫೋನಿನ ಹುಚ್ಚು ಉಂಟಾಗಬಹುದು. ಎಷ್ಟೋ ಜನರಿಗೆ ಫೋನಿನ ಹುಚ್ಚು ಈಗಾಗಲೇ ತಗುಲಿಬಿಟ್ಟಿದೆ. ಅವರು ನಿದ್ದೆಯಿಂದ ಏಳುವುದರಿಂದ ತೊಡಗಿ, ಮಗು ತಾಯಿಯ ಮೊಲೆಯನ್ನು ಚೀಪುವಂತೆ ಸಂಪೂರ್ಣವಾಗಿ ಫೋನಿನೊಂದಿಗೆ ಮಗ್ನರಾಗಿರುತ್ತಾರೆ. ಇವರು ಒಂದು ಮನೆಯಿಂದ ಇನ್ನೊಂದು ಮನೆಗೆ, ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಫೋನ್ ಮಾಡುತ್ತಾ ಇತರರಿಗೆ ತೊಂದರೆ ಕೊಡುತ್ತಲೇ ಇರುತ್ತಾರೆ.

ಇಂತಹವರಿಗಿರುವ ರೋಗವು ಗುಣಮುಖವಾಗಲೆಂದು ಪ್ರಾರ್ಥಿಸುವುದರ ಹೊರತು ನಾವು ಬೇರೇನನ್ನೂ ಹೇಳುವುದಿಲ್ಲ. ಈ ಹುಚ್ಚಿನಿಂದ ತಮ್ಮನ್ನು ರಕ್ಷಿಸಿಕೊಳ್ಳುವಂತೆ ನಾವು ಅವರಿಗೆ ಉಪದೇಶ ನೀಡುತ್ತೇವೆ.

## ಇ. ಬೆದರಿಕೆಯ ಫೋನ್:

ಸುನ್ನತ್ತಿನಲ್ಲಿ ದೃಢಪಟ್ಟಿರುವಂತೆ ಮುಸ್ಲಿಮನೊಬ್ಬನನ್ನು ಬೆದರಿಸುವುದು ಅವನಲ್ಲಿ ಭಯ ಹುಟ್ಟಿಸುವುದಕ್ಕೆ ಸಮಾನವಾಗಿದೆ. ಮುಸ್ಲಿಮನಲ್ಲಿ ಭಯವನ್ನು ಹುಟ್ಟಿಸುವುದು ಮಹಾಪಾಪವಾಗಿದೆ ಮತ್ತು ಘೋರ ಅಕ್ರಮವಾಗಿದೆ. ಸಹಾಬಾಗಳ ಪೈಕಿ ಕೆಲವರು ವರದಿ ಮಾಡಿದ ಪ್ರಕಾರ ಪ್ರವಾದಿ(ﷺ)ರವರು ಹೇಳಿದರು:

« لَا يَحِلُّ لِمُسْلِمٍ أَنْ يُرَوِّعَ مُسْلِمًا »

**"ಒಬ್ಬ ಮುಸ್ಲಿಮನಲ್ಲಿ ಭಯವನ್ನು ಹುಟ್ಟಿಸುವುದು ಇನ್ನೊಬ್ಬ ಮುಸ್ಲಿಮನಿಗೆ ಧರ್ಮಸಮ್ಮತವಲ್ಲ." [ಅಹ್ಮದ್, ಅಬೂ ದಾವೂದ್]**

ಇದೇ ರೀತಿಯ ಹದೀಸನ್ನು ಅತ್ತಬರಾನೀ ನುಅ್‌ಮಾನ್ ಇಬ್ನ್ ಬಶೀರ್(ರ) ರಿಂದ ವರದಿ ಮಾಡಿದ್ದಾರೆ. ಅಲ್‌ಬಝ್ಝಾರ್ ಕೂಡ ಇಬ್ನ್ ಉಮರ್(ರ) ರಿಂದ ಹೀಗೆಯೇ ವರದಿ ಮಾಡಿದ್ದಾರೆ.

ಒಬ್ಬ ಮುಸ್ಲಿಮನೆಡೆಗೆ ಅವನನ್ನು ಬೆದರಿಸುವುದಕ್ಕಾಗಿ ಕಬ್ಬಿಣದ ತುಂಡನ್ನು ತೋರಿಸುವುದು ವಿರೋಧಿಸಲ್ಪಟ್ಟಿರುವಂತೆಯೇ, ಒಬ್ಬ ಮುಸ್ಲಿಮನನ್ನು ಬೆದರಿಸು ವುದಕ್ಕಾಗಿ ಅಥವಾ ಭಯಪಡಿಸುವುದಕ್ಕಾಗಿ ಅವನೆಡೆಗೆ ದಿಟ್ಟಿಸಿ ನೋಡುವುದು ವಿರೋಧಿಸಲ್ಪಟ್ಟಿರುವಂತೆಯೇ, ಫೋನ್‌ನ ಮೂಲಕ ಬೆದರಿಸುವುದು ಕೂಡ ವಿರೋಧಿಸಲ್ಪಟ್ಟಿದೆ. ವಂಚನೆ, ಅಸೂಯೆ, ದ್ವೇಷ ಇತ್ಯಾದಿಗಳಿಂದಾಗಿ

ಮನುಷ್ಯತ್ವವು ಇಂದು ಮೃಗೀಯತೆಯಾಗಿ ಬದಲಾವಣೆಗೊಂಡಿದೆ. ಇತರರನ್ನು ಬೆದರಿಸುವ ಇಂತಹ ಮಂದಿಗೆ ಇನ್ನೊಬ್ಬರ ಬಗ್ಗೆ ಯಾವುದೇ ಅನುಕಂಪವಿರುವುದಿಲ್ಲ. ಅವರಿಗೆ ಹಾನಿಯುಂಟು ಮಾಡುವುದಕ್ಕಾಗಿ, ಅವರಿಗೆ ಅಲ್ಲಾಹು ನೀಡಿದ ಅನುಗ್ರಹವನ್ನು ವಶಪಡಿಸುವುದಕ್ಕಾಗಿ ಅಥವಾ ನಾಶ ಪಡಿಸುವುದಕ್ಕಾಗಿ ಇವರು ಎಂತಹ ಕೀಳ್ಮಟ್ಟಕ್ಕೆ ಇಳಿಯಲೂ ಹೇಸುವುದಿಲ್ಲ.

ಫೋನ್ ಮೂಲಕ ಬೆದರಿಸುವವರು ಒಂದು ಅಜ್ಞಾತ ಫೋನಿನ ಮೂಲಕ ಭಯಪಡಿಸುವ ಧ್ವನಿಯೊಂದಿಗೆ, ಅನೇಕ ಬೆದರಿಕೆಗಳನ್ನು ಒಡ್ಡುತ್ತಾರೆ. ಇದರಿಂದಾಗಿ ಬೆದರಿಕೆಗೆ ಒಳಗಾದವರು ನಿದ್ದೆಗೆಡುತ್ತಾರೆ. ಅವರ ಮೇಲೆ ಇದು ಬಹಳ ಪರಿಣಾಮ ಬೀರುತ್ತದೆ.

ಇವರು ಕಚ್ಚುವ ನಾಯಿಗಳಾಗಿದ್ದಾರೆ. ಅಲ್ಲಾಹು ಆ ಕ್ಷಣದಲ್ಲೇ ಅವರಿಗೆ ಶಿಕ್ಷೆ ನೀಡುವುದಾದರೂ ಅವರು ಅದಕ್ಕೆ ಅರ್ಹರಾಗಿದ್ದಾರೆ. ಬಹುಶಃ ಅನ್ಯಾಯ ಕ್ಕೊಳಗಾದವನ ಪ್ರಾರ್ಥನೆಯು ರಾತ್ರಿ ವೇಳೆಯಲ್ಲಿ ಶಿಕ್ಷೆಯ ರೂಪದಲ್ಲಿ ಬಂದು ಆ ದುಷ್ಟ ತನ್ನ ಮನೆಯೊಳಗೆಯೇ ನಾಶವಾಗಲೂ ಬಹುದು.

ಅನ್ಯಾಯ ಮತ್ತು ಅದಕ್ಕಿರುವ ಶಿಕ್ಷೆಯ ಬಗ್ಗೆ ನಾವು ಅಲ್ಲಾಹನೊಂದಿಗೆ ರಕ್ಷೆಯನ್ನು ಬೇಡುತ್ತೇವೆ.

**ಬೆದರಿಕೆಗೆ ಒಳಗಾದವರಿಗೆ ನಾನು ನೀಡುವ ಉಪದೇಶವೇನೆಂದರೆ,** ನೀವು ಧೈರ್ಯ ತಂದುಕೊಳ್ಳಬೇಕು, ಮನಸ್ಸನ್ನು ಗಟ್ಟಿ ಮಾಡಿಕೊಳ್ಳಬೇಕು, ಇಂತಹ ಕರೆಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು, ಅದನ್ನೊಂದು ಕೆಟ್ಟ ಕನಸೆಂದು ಭಾವಿಸಬೇಕು. ಕೆಟ್ಟ ಕನಸು ಶೈತಾನನಿಂದಾಗಿದೆ. ಅವನು ಮನುಷ್ಯನನ್ನು ಭಯಪಡಿಸುತ್ತಾನೆ. ಬೆದರಿಸುವ ಈ ಜನರು ಮನುಷ್ಯರಲ್ಲಿರುವ ಶೈತಾನ ರಾಗಿದ್ದಾರೆ. ಅವರ ಕೆಡುಕಿನಿಂದ ಕಾಪಾಡುವುದಕ್ಕಾಗಿ ನೀವು ಅಲ್ಲಾಹನಲ್ಲಿ ರಕ್ಷಣೆ ಬೇಡಿರಿ. ಅವರಿಗೆ ಅರ್ಹವಾದ ಶಿಕ್ಷೆಯನ್ನು ನೀಡಬೇಕೆಂದು ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ.

## ಎಫ್. ಕಾಲ್ಪನಿಕ ಫೋನ್:

ಸಮಾಜದಲ್ಲಿ ಕೆಲವು ಜನರಿದ್ದಾರೆ. ಇವರು ಜನರ ಮಧ್ಯೆ ದೊಡ್ಡ ವ್ಯಕ್ತಿಯೆಂದು ತಮ್ಮನ್ನು ಬಿಂಬಿಸಿಕೊಳ್ಳುತ್ತಾರೆ. ತಮಗೆ ಅರ್ಹತೆಯಿಲ್ಲದ ವಿಷಯದಲ್ಲಿ ತಾವು ಪ್ರಶಂಸಿಸಲ್ಪಡಬೇಕೆಂದು ಬಯಸುತ್ತಾರೆ. ಪ್ರವಾದಿ(ﷺ)ರಿಂದ ಸಹೀಹಾಗಿ ವರದಿಯಾಗಿರುವ ಪ್ರಕಾರ ಅವರು ಹೇಳುತ್ತಾರೆ:

« الْمُتَشَبِّعُ بِمَا لَمْ يُعْطَ كَلَابِسِ ثَوْبَيْ زُورٍ »

**"ತನ್ನಲ್ಲಿ ಇಲ್ಲದಿರುವುದನ್ನು ಇದೆಯೆಂದು ಹೇಳುವವನು ಎರಡು ಸುಳ್ಳು ಬಟ್ಟೆಗಳನ್ನು ಧರಿಸಿದವನಂತೆಯಾಗಿದ್ದಾನೆ."**

ಫೋನಿನ ಮೂಲಕ ಜಂಬಕೊಚ್ಚುವವರೂ ಇವರಲ್ಲಿ ಒಳಪಡುತ್ತಾರೆ. ಇವರು ಜನರ ಮಧ್ಯೆಯಿರುವಾಗ ತಮಗೆ ಕರೆ ಬಂದರೆ, ಅಥವಾ ತಾನು ಜನರ ಮಧ್ಯೆಯಿರುವಾಗ ತನಗೆ ಕರೆ ಮಾಡಬೇಕೆಂದು ಯಾರಲ್ಲಾದರೂ ಗುಪ್ತವಾಗಿ ಹೇಳಿ, ಕರೆ ಸ್ವೀಕರಿಸಿ ಮಾತನಾಡುವಾಗ ತಮ್ಮಲ್ಲಿ ಇಲ್ಲದಿರುವುದನ್ನು ಇದೆಯೆಂದು ಹೇಳುತ್ತಾ ತಮ್ಮನ್ನು ತಾವೇ ದೊಡ್ಡ ವ್ಯಕ್ತಿಯೆಂಬಂತೆ ಬಿಂಬಿಸಿಕೊಳ್ಳುತ್ತಾರೆ. ಇವರು ಮಾತನಾಡುವ ಕೆಲವು ವಾಕ್ಯಗಳು ಮತ್ತು ಮಾತನಾಡುವಾಗ ಇವರಲ್ಲಿ ಕಾಣುವ ಹಾವಭಾವಗಳು ಇತ್ಯಾದಿಗಳನ್ನು ನೋಡುವಾಗ ಈತನೊಬ್ಬ ಮಹಾ ವ್ಯಕ್ತಿಯೆಂದು ಜನರು ಭಾವಿಸಿಕೊಳ್ಳುತ್ತಾರೆ.

ಇದೊಂದು ಕಾಲ್ಪನಿಕ ಸುಳ್ಳು ಕರೆಯಾಗಿದೆ.

ನಾನು ಇಂತಹವರನ್ನು ಕಂಡಿದ್ದೇನೆ. ನೀವೂ ಸಹ ಇಂತಹವರನ್ನು ಕಂಡಿರಬಹುದು.

ಇಂತಹ ಜನರು ತಾವು ಬಹುಬೇಗನೇ ಜನರ ಮಧ್ಯೆ ನಗ್ನರಾಗುವೆವು ಎಂಬುದನ್ನು ಅರಿತುಕೊಳ್ಳುವುದು ಒಳಿತು. ಓ ಮುಸ್ಲಿಮರೇ ನೀವು ಇಂತಹ ಜನರಲ್ಲಿ ಸೇರಿದವರಾಗಬಾರದು.

* ಇವೆಲ್ಲವೂ ಫೋನ್ ಬಳಸುವ ವ್ಯಕ್ತಿ ಪಾಲಿಸಬೇಕಾದ ಶಿಷ್ಟಾಚಾರಗಳಾಗಿವೆ. ಮುಸ್ಲಿಮನು ಈ ಎಲ್ಲ ಶಿಷ್ಟಾಚಾರಗಳಿಂದ ತನ್ನನ್ನು ಅಲಂಕರಿಸಿಕೊಳ್ಳಬೇಕು. ವಿರೋಧ ಮತ್ತು ಎಚ್ಚರಿಕೆಗಳನ್ನು ಪಾಲಿಸಬೇಕು. ಇನ್ನು ಫೋನಿನ ಮೂಲಕ ಕರಾರುಗಳನ್ನು ಮಾಡಿಕೊಳ್ಳುವುದು ಮೊದಲಾದ ಫಿಕ್‌ಹೀ ವಿಷಯಗಳ ಬಗ್ಗೆ ಹೇಳುವುದಾದರೆ ಅದಕ್ಕೆ ಆಧುನಿಕ ವಿದ್ವಾಂಸರ ಬಳಿ ಅದರದ್ದೇ ಆದ ನಿಯಮಗಳಿವೆ. ಜಿದ್ದದಲ್ಲಿ ನಡೆದ ಆರನೇ ಸಭೆಯಲ್ಲಿ 'ಅಂತರಾಷ್ಟ್ರೀಯ ಇಸ್ಲಾಮೀ ಫಿಕ್‌ಹ್ ಸಂಕೀರ್ಣ'ವು ಇವುಗಳಲ್ಲಿ ಹೆಚ್ಚಿನವುಗಳನ್ನು ಅಧ್ಯಯನ ಮಾಡಿ, ಅವುಗಳ ಬಗ್ಗೆ ಆವಶ್ಯಕ ಹೇಳಿಕೆಗಳನ್ನು ನೀಡಿದೆ.

ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಸರ್ವಸ್ತುತಿ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********